ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಜೂನ್ 27, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 44 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

ಅಕ್ಷಯ TVS
AKSHAYA HAPPINESS TO ALL
ನಿಮ್ಮ ದಾವಣಗೆರೆಯಲ್ಲಿ iQube Electric Vehicle ಸೇಲ್ಸ್ ಮತ್ತು ಸರ್ವೀಸ್ ಪ್ರಾರಂಭ.
ಇಂದೇ ಬುಕ್ ಮಾಡಿ ನಿಮ್ಮ ಸವಾರಿ ಪರಿಸರ ಸ್ನೇಹಿಯಾಗಲಿ
+91 83101 77035 | +91 83101 77056
ವಿನಾಯಕ ನಗರ, ಹಳೆ ಪಿ.ಬಿ ರಸ್ತೆ, ಬಿ.ಎಸ್.ಎನ್.ಎಲ್ ಆಫೀಸ್ ಹತ್ತಿರ, ದಾವಣಗೆರೆ- 577006



ಇನ್ನಷ್ಟು ಶಕ್ತಿ,
ಇನ್ನಷ್ಟು ಸೌಂದರ್ಯ
TVS IQUBE ELECTRIC ಈಗ

## ಟ್ರಾಫಿಕ್ ಸಮಸ್ಯೆ ಇದ್ದರೆ '9480803208'ಗೆ ತಿಳಿಸಿ

ದಾವಣಗೆರೆ, ಜೂ.26- ಜಿಲ್ಲೆಯಲ್ಲಿ ಎಲ್ಲಿಯಾದರೂ ಸಂಚಾರಕ್ಕೆ ತೊಂದರೆಯಾಗಿದ್ದಲ್ಲಿ, ಯಾವುದೇ ರೀತಿಯ ಟ್ರಾಫಿಕ್ ಸಮಸ್ಯೆ ಇದ್ದಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ ಕಮಾಂಡ್ ಸೆಂಟರ್‌ನಲ್ಲಿ ಇರುವ ಮೊಬೈಲ್ ನಂಬರ್ 9480803208 ದಿನದ 24 ಗಂಟೆಯೂ ಸಾರ್ವಜನಿಕರು ಮಾಹಿತಿ ನೀಡುವ ವ್ಯವಸ್ಥೆಯನ್ನು ಜಿಲ್ಲಾ ಪೊಲೀಸ್ ಇಲಾಖೆ ಮಾಡಿದೆ.

ಈ ನಂಬರ್‌ಗೆ ಸಾರ್ವಜನಿಕರು ನೇರವಾಗಿ ಕರೆ ಮಾಡಿ ತಿಳಿಸಬಹುದು ಇಲ್ಲವೇ ಈ ನಂಬರಿನ ವಾಟ್ಸಾಪ್ ಮೂಲಕವೂ ಟ್ರಾಫಿಕ್ ಸಮಸ್ಯೆಗಳ ಬಗ್ಗೆ ಸಂದೇಶಗಳನ್ನು ಕಳುಹಿಸಿದಲ್ಲಿ, ನಿಮ್ಮ ಕರೆಗೆ ಕೂಡಲೇ ಸ್ಪಂದಿಸಿ ಟ್ರಾಫಿಕ್ ಸಮಸ್ಯೆ ಬಗೆಹರಿಸಲಾಗುವುದು.

ಅಲ್ಲದೇ ಯಾವುದಾದರೂ ಸಂಚಾರ ನಿಯಮ ಉಲ್ಲಂಘನೆ ಸಾರ್ವಜನಿಕರಿಗೆ ಕಂಡುಬಂದಲ್ಲಿ ಅವರು ಅದರ ಫೋಟೋ ತೆಗೆದು, ವಾಹನದ ನೋಂದಣಿ ಸಂಖ್ಯೆ ಸಮೇತ ಸ್ಥಳ ಮತ್ತು ಸಮಯವನ್ನು ನಮೂದಿಸಿ, ಈ ನಂಬರ್‌ಗೆ ವಾಟ್ಸಾಪ್ ಮಾಡಿದಲ್ಲಿ ಆ ವಾಹನ ಸವಾರರ ವಿರುದ್ದ ಸಾರ್ವಜನಿಕರ ದೂರು ಎಂದು ದಾಖಲಿಸಿ, ಸಂಚಾರ ನಿಯಮದಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

## ಬಿಜೆಪಿಯಲ್ಲಿ ಅಶಿಸ್ತು ಹೆಚ್ಚಳ

### ಈಶ್ವರಪ್ಪ ಅಸಮಾಧಾನ, ಕ್ರಮಕ್ಕೆ ಒತ್ತಾಯ



ಬೆಂಗಳೂರು,ಜೂ. 26 - ಬಿಜೆಪಿಯಲ್ಲಿ ಅಶಿಸ್ತು ಹೆಚ್ಚಾಗುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಪಕ್ಷದ ಹಿರಿಯ ನಾಯಕ ಕೆ.ಎಸ್. ಈಶ್ವ ರಪ್ಪ, ಈ ಬಗ್ಗೆ ಕ್ರಮ ತೆಗೆದು ಕೊಳ್ಳುವಂತೆ ರಾಜ್ಯಾಧ್ಯಕ್ಷರಿಗೆ ಒತ್ತಾಯಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ ಈಗ ದೇಶದಲ್ಲಿ ಬೆಳೆದಿದೆ. ವಿಶ್ವದಲ್ಲೇ ಅತಿ ದೊಡ್ಡ ಪಕ್ಷವಾಗಿದೆ. ನಾವು ನಾಲ್ಕೇ ಜನ ಇದ್ದಾಗ ಶಿಸ್ತು ಇತ್ತು. ಈಗ ಸ್ವಲ್ಪ ಅಶಿಸ್ತು ಉಂಟಾಗಿದೆ ಎಂದರು.

ಮೊದಲು ನಾಲ್ಕು ಗೋಡೆಗಳ ನಡುವೆ ನಡೆಯುತ್ತಿದ್ದ ಚರ್ಚೆಗಳು, ಈಗ ಹೊರಗಡೆಯೂ ನಡೆಯುವಂತಾಗಿರುವುದು ದುರಾದೃಷ್ಟ. ಈ ಬಗ್ಗೆ ರಾಜ್ಯಾಧ್ಯಕ್ಷರ ಜೊತೆ ಮಾತನಾಡಿದ್ದೇನೆ. ಬಹಿರಂಗ ಹೇಳಿಕೆ ನೀಡುತ್ತಿರುವವರ ಜೊತೆ ಮಾತನಾಡಿ ವಿಷಯ ಬಗೆಹರಿಸುವಂತೆ ಕೇಳಿದ್ದೇನೆ ಎಂದು ಈಶ್ವರಪ್ಪ ಹೇಳಿದರು.

ಹೊಂದಾಣಿಕೆ ರಾಜಕೀಯದ ಬಗ್ಗೆ ಬಿಜೆಪಿಯ ಹಲವಾರು ನಾಯಕರು ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಕೇಳಿದ ಪ್ರಶ್ನೆಗೆ ಈಶ್ವರಪ್ಪ ಉತ್ತರಿಸುತ್ತಿದ್ದರು.

ಚುನಾವಣಾ ಸೋಲಿನಿಂದ ಈಗಾಗಲೇ ಕಾರ್ಯಕರ್ತರು ನೊಂದಿ ದ್ದಾರೆ. ಬಹಿರಂಗ ಹೇಳಿಕೆ ನೀಡುವುದರಿಂದ ಶಿಸ್ತಿಗೆ ಮತ್ತಷ್ಟು ಧಕ್ಕೆಯಾಗುತ್ತದೆ. ಏನಾದರೂ ವಿಷಯ ಇದ್ದರೆ ರಾಜ್ಯಾಧ್ಯಕ್ಷರು ಹಾಗೂ ನಾಯಕತ್ವದ ಗಮನಕ್ಕೆ ತರಬೇಕು ಎಂದರು.

ಪಕ್ಷದಲ್ಲಿ ಸ್ವಲ್ಪ ಕಾಂಗ್ರೆಸ್ ಗಾಳಿ ಬೀಸುತ್ತಿದೆ. ಕಾಂಗ್ರೆಸ್‌ನ ಬಹಳಷ್ಟು ಜನರನ್ನು ನಾವೇ ಕರೆದುಕೊಂಡು ಬಂದಿದ್ದೇವೆ. ಈಗ ಅನುಭವಿಸುತ್ತಿದ್ದೇವೆ. ಅವರಿಂದ ಹಿನ್ನಡೆಯಾಗಿದೆ ಎಂದು ಹೇಳುವುದಿಲ್ಲ. ಸ್ವಲ್ಪ ಅಶಿಸ್ತು ಉಂಟಾಗಿದೆ, ಸರಿಪಡಿಸಿಕೊಳ್ಳುತ್ತೇವೆ (3ನೇ ಪುಟಕ್ಕೆ)

# ಅಧಿಕಾರ ಮದದ ರಾಜಕಾರಣ ಬೇಡ

## ನೂತನ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು

ಬೆಂಗಳೂರು, ಜೂ. 26 - ಸಾರ್ವಜನಿಕರ ಮುಂದೆ ಹಣ, ಧಿಮಾಕು, ಅಧಿಕಾರದ ಮದದಿಂದ ರಾಜಕಾರಣ ಮಾಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರಿಗೆ ಇಂದಿಲ್ಲಿ ಕಿವಿ ಮಾತು ಹೇಳಿದ್ದಾರೆ.

ಬೆವರು-ಶ್ರಮ ಸಂಸ್ಕೃತಿಗೆ ಅಸಹ್ಯ ಪಡದೆ ಜನರನ್ನು ಗೌರವಿಸಿದರಷ್ಟೇ ನೀವು ಜನಪ್ರತಿನಿಧಿಯಾಗಿ ಉಳಿಯುತ್ತೀರಿ ಎಂದು ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರು ಹೊರವಲಯದ ಕ್ಷೇಮ ವನದಲ್ಲಿ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಸದಸ್ಯರಿಗೆ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನೀವು ಈ ಸಿದ್ಧಾಂತಗಳನ್ನು ಇಟ್ಟುಕೊಳ್ಳದಿದ್ದರೆ, ಒಮ್ಮೆಯಷ್ಟೇ ಶಾಸಕರಾಗಬಹುದು ಎಂದು ಹಿತವಚನ ನೀಡಿದ್ದಾರೆ.

ಶ್ರಮ ಸಂಸ್ಕೃತಿಗೆ ಅಸಹ್ಯ ಪಡದವರನ್ನು ಜನರು ಗೌರವಿಸಿ, ಅವರನ್ನು ವಿಧಾನಸಭೆಗೆ ಮರು ಆಯ್ಕೆ ಮಾಡುತ್ತಾರೆ. ಅಂತಹ ನಿದರ್ಶನಗಳು ನಮ್ಮ ಕಣ್ಮುಂದಿವೆ. ಒಮ್ಮೆಯಾದರು ವಿಧಾನಸೌಧದ ಮೆಟ್ಟಿಲು ಹತ್ತಬೇಕು ಎಂಬ ತವಕ ಬಹಳಷ್ಟು ಮಂದಿಗೆ ಇರುತ್ತದೆ. ಶಾಸಕರಾದವರು ನಡವಳಿಕೆ ಮತ್ತು ನೀತಿಯನ್ನು ಅಳವಡಿಸಿಕೊಂಡರೆ ನಿಮಗೆ ಇದು ಸಾಧ್ಯ.



ಜನಪರ ನಿಲುವು, ಭಾಷೆ, ವಿಷಯ ತಜ್ಞತೆ, ಅಧ್ಯಯನಶೀಲತೆ, ಸಿದ್ಧತೆ ಮತ್ತು ತರಬೇತಿ ಪ್ರತಿ ಸದಸ್ಯರಿಗೂ ಅತ್ಯಗತ್ಯ. ಸಂಸದೀಯ ಭಾಷೆ ಕಲಿತು ವಿಷಯ ಪರಿಣತರಾದರೆ, ಸರ್ಕಾರದ ಹುಳುಕುಗಳನ್ನು ಹೊರ ತೆಗೆದು ಸರ್ಕಾರದ ಕಿವಿ ಹಿಂಡಬಹುದು.

ಸಂಸದೀಯ ಪ್ರಜಾಪ್ರಭುತ್ವದ ದೇಗುಲ ವಿಧಾನಸಭೆ. ಇಲ್ಲಿ ಜನರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸಿ, ಪರಿಹಾರ ಪಡೆದುಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳಿ ಎಂದು ಅವರು ಕರೆ ನೀಡಿದರು. ಯಾರು ಸಂವಿಧಾನವನ್ನು ಓದಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಅವರು ಉತ್ತಮ ಶಾಸಕರಾಗಲು, ಸಂಸದರಾಗಲು ಸಾಧ್ಯವಿಲ್ಲ. ಆದ್ದರಿಂದ ಮೊದಲು ಸಂವಿಧಾನವನ್ನು ಓದಿ ಅದರ ಮೂಲಭೂತ ತತ್ವ ಮತ್ತು ಉದ್ದೇಶಗಳನ್ನು ಅರಿತುಕೊಳ್ಳಿ.

ಸದನದ ನಿಯಮಾವಳಿಗಳನ್ನು ನಾವೇ ಮಾಡಿದ್ದೇವೆ. ಅದನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಂಡರೆ ಜನರ ಸಮಸ್ಯೆಗಳನ್ನು ನಿಯಮಬದ್ಧವಾಗಿ ಸದನದ ಮುಂದೆ ಮಂಡಿಸಬಹುದು. ಸಂವಿಧಾನಕ್ಕೆ ವಿರುದ್ಧವಾದ ಕಾನೂನು-ಕಾಯ್ದೆಗಳನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸಂವಿಧಾನದ ಓದು ಅತ್ಯಗತ್ಯ ಎಂದರು.

ನಾನು ಮೊದಲ ಬಾರಿ ಹಣಕಾಸು ಸಚಿವನಾದಾಗ 'ನೂರು ಕುರಿ ಎಣಿಸಲು ಬಾರದವನು ಬಜೆಟ್ ಹೇಗೆ ಮಾಡ್ತಾರೆ?' ಎಂದು ಪತ್ರಿಕೆಯೊಂದು ಟೀಕಿಸಿತ್ತು. ಟೀಕೆಯನ್ನು ನಾನು ಸವಾಲಾಗಿ ಸ್ವೀಕರಿಸಿ, ನಿರಂತರ ವಿಷಯ ತಜ್ಞರ ಜತೆ ಚರ್ಚಿಸಿ, ಬಜೆಟ್ ಮಂಡಿಸಿದೆ.

ಮರುದಿನ ರಾಷ್ಟ್ರೀಯ ಪತ್ರಿಕೆ ನನ್ನ ಬಜೆಟ್ಟನ್ನು ಅತ್ಯುತ್ತಮ ಎಂದು ಶ್ಲಾಘಿಸಿ ಸಂಪಾದಕೀಯ ಬರೆಯಿತು. ಹೀಗಾಗಿ ಜ್ಞಾನ ದಾಹ ಮತ್ತು ಅಧ್ಯಯನಶೀಲತೆಯನ್ನು ಬೆಳೆಸಿಕೊಳ್ಳಿ ಎಂದು ತಮ್ಮದೇ ಉದಾಹರಣೆ ಮೂಲಕ ಶಾಸಕರಿಗೆ (3ನೇ ಪುಟಕ್ಕೆ)




**ದಾವಣಗೆರೆ ಬಿಐಇಟಿ ಕ್ಯಾಂಪಸ್‌ನಲ್ಲಿ ಜೇನು ಹುಳುವೊಂದು ಮಕರಂದ ಹೀರುತ್ತಿರುವ ಚಿತ್ರವಿದು. ಈ ಚಂದದ ಚಿತ್ರದಲ್ಲಿ ಜೇನು ಮಕರಂದವನ್ನು ಹೀರುವಲ್ಲಿನ ತಾಳ್ಮೆ, ಉತ್ಸಾಹ, ಹೂವಿಗೆ ನೋವಾಗದಂತೆ ಸಾರವನ್ನು ಸೆಳೆದುಕೊಳ್ಳುವ ಬಗೆ ಎಲ್ಲವನ್ನೂ ಸೂಕ್ಷ್ಮವಾಗಿ ನೋಡಿದಾಗ ನಿಜವಾಗಿಯೂ ನಮಗೆ ಜೇನುಹುಳು ಬದುಕಿಗೆ ಮಾದರಿ ಎಂಬ ಸತ್ಯ ಗೊತ್ತಾಗುತ್ತದೆ. ನಾವು ಕೂಡ ಈ ಸಮಾಜದಲ್ಲಿ ಸುವಿಚಾರಗಳನ್ನು ಸ್ವೀಕರಿಸುವ, ಪರರಿಗೆ ನೋವಾಗದಂತೆ ನಡೆದುಕೊಳ್ಳುವ, ಜೀವನೋತ್ಸಾಹವನ್ನು ಕಳೆದುಕೊಳ್ಳದೇ ಯಾವಾಗಲೂ ಹುಮ್ಮಸ್ಸಿನಿಂದ ಇರಲು ಈ ಜೇನಿನ ಬದುಕು ಮಾದರಿ !**

# ವಿದ್ಯಾವಂತ ಮಕ್ಕಳನ್ನು ದೇಶದ ಆಸ್ತಿಯಾಗಿಸಿ

## ಜಗಳೂರು: ಫಲಾನುಭವಿಗಳ ಭೇಟಿ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ

ಜಗಳೂರು, ಜೂ.26- ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ದೇಶದ ಆಸ್ತಿಯನ್ನಾಗಿಸಬೇಕು ಎಂದು ಸಂಸದ ಜಿ.ಎಂ ಸಿದ್ದೇಶ್ವರ್ ಸಲಹೆ ನೀಡಿದರು.

ತಾಲ್ಲೂಕಿನ ಅಸಗೋಡು ಗ್ರಾಮದ ಶಂಭುಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ 22 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆ ಫಲಾನುಭವಿಗಳ ಭೇಟಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರದಲ್ಲಿನ ಬಿಜೆಪಿ ಸರ್ಕಾರದ ಪ್ರಧಾನಿ ಮೋದೀಜಿ ಅವರ ಸೂರು ಕಲ್ಪಿಸುವ ಸಂಕಲ್ಪದಂತೆ ಬಡ ವರ್ಗದ ವಸತಿ ರಹಿತರಿಗೆ ಪ್ರಧಾನಮಂತ್ರಿ ಆವಾಸ್ ವಸತಿ ಯೋಜನೆಯಡಿ 1001 ಗುರಿಯಲ್ಲಿ 831 ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದರು.

ಆಯುಷ್ಮಾನ್ ಭಾರತ್ ಕಾರ್ಡ್‌ನಿಂದ ಆರೋಗ್ಯ ಸೇವೆ ಲಭ್ಯವಿದ್ದು, ಪ್ರತಿಯೊಬ್ಬರೂ ಕಡ್ಡಾಯವಾಗಿ ಕಾರ್ಡ್ ಮಾಡಿಸಬೇಕು. ಅನಾರೋಗ್ಯದ ವೇಳೆ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ರೂ.



5 ಲಕ್ಷದವರೆಗೆ ಉಚಿತ ಸೌಲಭ್ಯವನ್ನು ಬಡವರು ಪಡೆಯಬಹುದು. ಜನ್‌ಧನ್ ಖಾತೆ ತೆರೆದರೆ ನೇರವಾಗಿ ಫಲಾನುಭವಿಗಳಿಗೆ ಹಣ ಜಮಾ ಮಾಡಲಾಗುವುದು. ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ವಾರ್ಷಿಕವಾಗಿ ರೂ. 430 ಶುಲ್ಕ ಭರಿಸಿದರೆ ಎಲ್ಲಾ ವರ್ಗದವರಿಗೆ ಅಪಘಾತದ ವೇಳೆ ರೂ. 2 ಲಕ್ಷ, ಮೃತರಿಗೆ ರೂ. 5 ಲಕ್ಷ ಪರಿಹಾರ ಒದಗಿಸಲಾಗುವುದು. ಸಣ್ಣ ಕೈಗಾರಿಕೋದ್ಯಮಿಗಳಿಗೆ ರೂ.2 ಲಕ್ಷದವರೆಗೆ ಸಾಲ ಸೌಲಭ್ಯ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿಗೆ ತಲಾ ರೂ. 15 ಲಕ್ಷ ಸಹಾಯಧನ ನೀಡಲಾಗಿದೆ. ಕೇಂದ್ರ ಸರ್ಕಾರದ ಯೋಜನೆಗಳ ಲಾಭ ಪಡೆಯಬೇಕು ಎಂದು ಹೇಳಿದರು.

ಕ್ಷೇತ್ರಕ್ಕೆ ರೂ. 4500 ಕೋಟಿ ಅನುದಾನದಲ್ಲಿ 3 ಮಹತ್ತರ ನೀರಾವರಿ ಯೋಜನೆಗಳು ಸೇರಿದಂತೆ ರಸ್ತೆ, ಭವನಗಳ ನಿರ್ಮಾಣ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದರೂ ಎಸ್.ವಿ. ರಾಮಚಂದ್ರ ಅವರು ಸೋತರು. ಆದರೂ ಅವರು ಸೋಲಿನಿಂದ ಧೃತಿಗೆಟ್ಟಿಲ್ಲ ಜನರ ಮಧ್ಯೆ ಇದ್ದಾರೆ ಎಂದು ತಿಳಿಸಿದರು. ಸರ್ಕಾರಿ (3ನೇ ಪುಟಕ್ಕೆ)

## ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ 60 ಸಾವಿರ ಕೋಟಿ ರೂ.




ಬೆಂಗಳೂರು, ಜೂ. 26 – ಕಾಂಗ್ರೆಸ್ ಪಕ್ಷ ಚುನಾವಣಾ ಸಂದರ್ಭದಲ್ಲಿ ಭರವಸೆ ನೀಡಿದ್ದ 5 ಗ್ಯಾರಂಟಿಗಳ ಅನುಷ್ಠಾನಕ್ಕೆ 60 ಸಾವಿರ ಕೋಟಿ ರೂ. ಬೇಕಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬರುವ ಜುಲೈ 7ರಂದು ನೂತನ ಕಾಂಗ್ರೆಸ್ ಸರ್ಕಾರ ಹೊಸ ಬಜೆಟ್ ಮಂಡಿಸಲಿದ್ದು, ಅದರ ಗಾತ್ರ 3.35 ಲಕ್ಷ ಕೋಟಿ ರೂ.ಗಳಾಗಬಹುದು ಎಂದೂ ಅವರು ತಿಳಿಸಿದ್ದಾರೆ.

ನೂತನ ಶಾಸಕರಿಗೆ ಆಯೋಜಿಸಲಾಗಿದ್ದ ಶಿಬಿರದಲ್ಲಿ ಮಾತನಾಡಿದ ಅವರು, ಈ ವರ್ಷದ ಉಳಿದ ಅವಧಿಯಲ್ಲಿ ಗ್ಯಾರಂಟಿಗಳಿಗೆ 40 ಸಾವಿರ ಕೋಟಿ ರೂ. ಬೇಕಾಗಲಿದೆ. ಒಟ್ಟಾರೆ ವರ್ಷಕ್ಕೆ 59ರಿಂದ 60 ಸಾವಿರ ಕೋಟಿ ರೂ. ಬೇಕಾಗಬಹುದು ಎಂದು ಹೇಳಿದರು.

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೃಷ್ಣಮೂರ್ತಿ ಪಿ. ಕುರ್ಡೇಕರ್
(ಉತ್ತಂಗಿ)
ಜನನ : 1963 - ನಿಧನ : 2020
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ... ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...
ಧರ್ಮಪತ್ನಿ ಮತ್ತು ಮಕ್ಕಳು, ಅಳಿಯಂದಿರು, ಸಹೋದರ-ಸಹೋದರಿಯರು, ಉತ್ತಂಗಿ, ಕುರ್ಡೇಕರ್ ಕುಟುಂಬದವರು
ಉತ್ತಂಗಿ ಜ್ಯೂಯಲರ್ಸ್
ಚೌಕಿಪೇಟೆ, ದಾವಣಗೆರೆ.

# ಯಡಿಯೂರಪ್ಪ ಹೋರಾಟ ರಾಜಕೀಯ ಗಿಮಿಕ್ : ಸಿಎಂ

ಬೆಂಗಳೂರು, ಜೂ. 26 – ಕಾಂಗ್ರೆಸ್ ಸರ್ಕಾರ ಚುನಾವಣಾ ಗ್ಯಾರಂಟಿಗಳ ಜಾರಿಗಾಗಿ ಹೋರಾಟ ನಡೆಸಲು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರಿಗೆ ನೈತಿಕ ಹಕ್ಕಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

> **ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಈಡೇರಿಸದ ಯಡಿಯೂರಪ್ಪಗೆ ಪ್ರತಿಭಟನೆ ನಡೆಸಲು ನೈತಿಕ ಹಕ್ಕಿಲ್ಲ - ಸಿದ್ದರಾಮಯ್ಯ**

ಈ ಹಿಂದೆ ಕಾಂಗ್ರೆಸ್ ನೀಡಿದ್ದ ಚುನಾವಣಾ ಭರವಸೆಗಳನ್ನು ಈಡೇರಿಸಿದೆ. ಈ ಬಾರಿಯೂ ಗ್ಯಾರಂಟಿಗಳನ್ನು ಜಾರಿಗೆ ತರಲು ಈಗಾಗಲೇ ತೀರ್ಮಾನ ತೆಗೆದು ಕೊಳ್ಳಲಾಗಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ತಿಳಿಸಿದರು.

ಯಡಿಯೂರಪ್ಪ ಅವರು ಬಿಜೆಪಿ ಅಧ್ಯಕ್ಷರಾಗಿದ್ದರು, ನಂತರ ಮುಖ್ಯಮಂತ್ರಿ ಆಗಿದ್ದರು. ಅವರು ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯನ್ನು ಈಡೇರಿಸಿದ್ದರೇ? ಇಲ್ಲ. ಹೀಗಿರುವಾಗ ಅವರಿಗೆ ಪ್ರತಿಭಟನೆ ನಡೆಸಲು ನೈತಿಕ ಹಕ್ಕಿಲ್ಲ ಎಂದರು. 2013-18ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಪ್ರಣಾಳಿಕೆಯನ್ನು ಜಾರಿಗೆ ತರಲಾಗಿದೆ. ಈಗ ಐದು ಗ್ಯಾರಂಟಿಗಳನ್ನು ಜಾರಿಗೆ ತರಲು ಈಗಾಗಲೇ ನಿರ್ಧಾರ ತೆಗೆದುಕೊಂಡಿದ್ದೇವೆ. ಯಡಿಯೂರಪ್ಪ ನಡೆಸಲು ಉದ್ದೇಶಿಸಿರುವ ಪ್ರತಿಭಟನೆ ರಾಜಕೀಯ ಗಿಮಿಕ್ ಎಂದು ಆರೋಪಿಸಿದರು.

ಜುಲೈನಲ್ಲಿ ನಡೆಯಲಿರುವ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಸದನದ ಒಳಗೆ ಹಾಗೂ ಹೊರಗೆ ಹೋರಾಟ ನಡೆಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದ್ದರು. ಜುಲೈ 3ರಿಂದ 14ರವರೆಗೆ ವಿಧಾನಮಂಡಲದ ಅಧಿವೇಶನ ನಡೆಯಲಿದೆ. ಈ ಸಂದರ್ಭದಲ್ಲಿ ಸರ್ಕಾರ ಹೊಸ ಬಜೆಟ್ ಮಂಡಿಸಲಿದೆ.

## ರಾಜ್ಯಸಭಾ ಸದಸ್ಯ ಹರದ್ವಾರ್ ದುಬೆ ನಿಧನ



ನವದೆಹಲಿ, ಜೂ. 26 – ಉತ್ತರ ಪ್ರದೇಶದಿಂದ ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯರಾಗಿದ್ದ ಹರದ್ವಾರ್ ದುಬೆ ನಿಧನರಾಗಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿತ್ತು. ಉತ್ತರ ಪ್ರದೇಶದ ಫೋರ್ಟಿಸ್ ಆಸ್ಪತ್ರೆಯಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ.

# ಎಲ್ಲಾ ಜೀವಿಗಳಿಗೂ ಬದುಕುವ ಸಮಾನ ಹಕ್ಕಿದೆ

ಬೆಂಗಳೂರು, ಜೂ.26 - ಅರಣ್ಯ ಮತ್ತು ಮೃಗಪಕ್ಷಿಗಳು ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿ, ಧರ್ಮದ ಭಾಗವಾಗಿವೆ. ಈ ಬ್ರಹ್ಮಾಂಡದಲ್ಲಿ ಎಲ್ಲ ಜೀವಿಗಳಿಗೂ ಬದುಕುವ ಸಮಾನ ಅವಕಾಶವಿದೆ, ಹಕ್ಕಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದಾರೆ.

ವಿಧಾನಸೌಧದಲ್ಲಿಂದು ಅರಣ್ಯ ಇಲಾಖೆಯ ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಅವರು, ಜನರ ಆಶೀರ್ವಾದದಿಂದ ಹೊಸ ಸರ್ಕಾರ ಬಂದಿದೆ. ರಾಜ್ಯದೆಲ್ಲೆಡೆ ಹೊಸ ಹುರುಪು ಮೂಡಿದೆ. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಗೂ ಹೊಸ ಹುರುಪು ನೀಡಲು ಲಾಂಛನ ಬಿಡುಗಡೆ ಮಾಡಲಾಗಿದೆ ಎಂದರು.

ಅರಣ್ಯ ಸಚಿವಾಲಯ ಹಲವು ದಶಕಗಳಿಂದ ಅಸ್ತಿತ್ವದಲ್ಲಿದೆ. ಆದರೆ ಈ ಇಲಾಖೆಗೆ ತನ್ನದೇ ಆದ ಸ್ವಂತ ಲಾಂಛನ ಇರಲಿಲ್ಲ. ಈಗ ಆ ಕಾಲ ಕೂಡಿ ಬಂದಿದೆ. ಇಲಾಖೆಯ ಉದ್ದೇಶ, ಮೌಲ್ಯಗಳು ಮತ್ತು ಕಾರ್ಯವನ್ನು ಪ್ರತಿನಿಧಿಸುವ ರೀತಿಯಲ್ಲಿ ಲಾಂಛನವನ್ನು ರೂಪಿಸಲಾಗಿದೆ ಎಂದು ಹೇಳಿದರು.




ಲಾಂಛನ ಬಿಡುಗಡೆಯಲ್ಲಿ ಈಶ್ವರ ಖಂಡ್ರೆ

ಇಲಾಖೆಯ ಲಾಂಛನವು ಸಮಾಜದಲ್ಲಿ ವಿಶಿಷ್ಟ ಅಸ್ಮಿತೆ ಸ್ಥಾಪಿಸುತ್ತದೆ. ಜನರಲ್ಲಿ ಅರಣ್ಯ ಇಲಾಖೆಯ ಬಗ್ಗೆ ಹೆಮ್ಮೆ ಮೂಡಿಸಲು ನೆರವಾಗುತ್ತದೆ. ಇನ್ನು ಮುಂದೆ ಇಲಾಖೆಯ ಅಧಿಕೃತ ವೆಬ್‌ಸೈಟ್, ಸಾಮಾಜಿಕ ಮಾಧ್ಯಮ ತಾಣಗಳು ಮತ್ತು ಪ್ರಚಾರ ಸಾಮಗ್ರಿಗಳಲ್ಲಿ ಈ ಲೋಗೋ ಬಳಸಲಾಗುವುದು ಎಂದರು.

ಕರ್ನಾಟಕ ಅರಣ್ಯ ಇಲಾಖೆಯ ಕಾರ್ಯ, ಉದ್ದೇಶವನ್ನು ಬಿಂಬಿಸುವಂತಹ ತನ್ನದೇ ಆದ ಲಾಂಛನ ಅಳವಡಿಸಿಕೊಳ್ಳಲು ನಿರ್ಧರಿಸಿ ಕಳೆದ ವರ್ಷ ವಿದ್ಯಾರ್ಥಿಗಳನ್ನು, ಕಲಾವಿದರು ಮತ್ತು ಸಾರ್ವಜನಿಕರಿಂದ ಲಾಂಛನ ರಚಿಸುವಂತೆ ಕೋರಿ ಲೋಗೋ ವಿನ್ಯಾಸ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ರಾಜ್ಯಾದ್ಯಂತದಿಂದ ಒಟ್ಟು 309 ಲೋಗೋ ವಿನ್ಯಾಸಗಳು ಬಂದಿದ್ದವು. ಈ ಎಲ್ಲವನ್ನೂ ಪರಿಶೀಲಿಸಲು, ಒಂದು ಸಮಿತಿಯನ್ನು ರಚಿಸಿ, 3 ಹಂತಗಳಲ್ಲಿ ಸ್ಪರ್ಧೆಯನ್ನು ನಡೆಸಿ, ಅಂತಿಮವಾಗಿ ಈ ಲೋಗೋ ಆಯ್ಕೆ ಮಾಡಲಾಗಿದೆ ಎಂದರು.

ಸ್ಪರ್ಧೆಯ ವಿಜೇತ ಮೈಸೂರಿನ ಶಮಂತ್ ಗೊರೂರು ಅವರಿಗೆ 20 ಸಾವಿರ ರೂ. ನಗದು ಬಹುಮಾನ, ಪ್ರಮಾಣ ಪತ್ರವನ್ನೂ ಸಚಿವರು ಪ್ರದಾನ ಮಾಡಿದರು. ಈ ಮೊತ್ತವನ್ನು 50 ಸಾವಿರಕ್ಕೆ ಹೆಚ್ಚಿಸುವುದಾಗಿಯೂ ಪ್ರಕಟಿಸಿದರು.

ನಮ್ಮ ರಾಷ್ಟ್ರ (2ನೇ ಪುಟಕ್ಕೆ)

## ಸಾಮಾನ್ಯ ಚಂಡಮಾರುತಕ್ಕಿಂತ ದುಪ್ಪಟ್ಟು ಸಕ್ರಿಯವಾಗಿದ್ದ ಬಿಪರ್‌ಜಾಯ್

ನವದೆಹಲಿ, ಜೂ. 26 – ಗುಜರಾತ್‌ಗೆ ಅಪ್ಪಳಿಸಿದ್ದ ಬಿಪರ್‌ಜಾಯ್ ಚಂಡಮಾರುತ 1977ರ ನಂತರ ಅತ್ಯಂತ ದೀರ್ಘ ಅವಧಿಯದ್ದಾಗಿದೆ. ಈ ಚಂಡಮಾರುತ 13 ದಿನ ಹಾಗೂ 3 ಗಂಟೆಗಳ ಕಾಲ ಸಕ್ರಿಯವಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ವರ್ಷ ಅರಬ್ಬೀ ಸಮುದ್ರದಲ್ಲಿ ಕಂಡು ಬಂದ ಮೊದಲ ಚಂಡಮಾರುತವಾಗಿರುವ ಬಿಪರ್‌ಜಾಯ್ ಜೂನ್ 6ರಿಂದ ಜೂನ್ 15ರವರೆಗೆ ಸಕ್ರಿಯವಾಗಿತ್ತು.

ಚಂಡಮಾರುತ ಜೂನ್ 18ರಂದು ವಾಯುಭಾರ ಕುಸಿತವಾಗಿ ಪರಿವರ್ತನೆಯಾಗಿತ್ತು.

ಸಾಮಾನ್ಯವಾಗಿ ಅರಬ್ಬೀ ಸಮುದ್ರದಲ್ಲಿ ಕಂಡು ಬರುವ ಚಂಡಮಾರುತಗಳು ಆರು ದಿನ ಸಕ್ರಿಯವಾಗಿರುತ್ತವೆ. ಬಿಪರ್‌ಜಾಯ್ ಚಂಡಮಾರುತ ದುಪ್ಪಟ್ಟು ಅವಧಿಗೆ ಸಕ್ರಿಯವಾಗಿತ್ತು.

# ಜೀವನ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಜ್ಞಾನ ಅವಶ್ಯ

## ಭರಮಸಾಗರದ ಪವಮಾನ ಪ್ರತಿಷ್ಠಾನದ ಶಾರದಾ ಪುರಸ್ಕಾರದಲ್ಲಿ ಹಿರಿಯ ಪತ್ರಕರ್ತ ಎಚ್. ಬಿ. ಮಂಜುನಾಥ್



ಭರಮಸಾಗರ, ಜೂ. 26- ಶಾಲಾ-ಕಾಲೇಜು ವಾರ್ಷಿಕ ಪರೀಕ್ಷೆಗಳು ವರ್ಷಕ್ಕೊಮ್ಮೆಯಾದರೆ ಜೀವನ ಪರೀಕ್ಷೆ ನಿರಂತರವಾದದ್ದು, ಶಿಕ್ಷಣದಲ್ಲಿ ಪಡೆದದ್ದನ್ನು ಪರೀಕ್ಷೆಯಲ್ಲಿ ಬರೆದು ಮರೆಯದೇ ಅದನ್ನು ಜ್ಞಾನವಾಗಿ ಪರಿವರ್ತಿಸಿಕೊಂಡಲ್ಲಿ ಮಾತ್ರ ಜೀವನ ಪರೀಕ್ಷೆಯಲ್ಲೂ ಯಶಸ್ಸು ಸಾಧಿಸಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಅಭಿಪ್ರಾಯಪಟ್ಟರು.

ಭರಮಸಾಗರದ ಪವಮಾನ ಪ್ರತಿಷ್ಠಾನದ ವತಿಯಿಂದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶಾರದಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶ್ವದ ಬೇರೆಲ್ಲಾ ದೇಶಗಳ ವಿದ್ಯಾರ್ಥಿಗಳಿಗಿಂತ ಭಾರತದ ವಿದ್ಯಾರ್ಥಿಗಳಲ್ಲಿ ಜ್ಞಾಪಕ ಶಕ್ತಿ ಮತ್ತು ಬುದ್ಧಿ ಸಾಮರ್ಥ್ಯ ಅಧಿಕವಾಗಿದ್ದರೂ, ಶಿಕ್ಷಣವನ್ನು ಪರೀಕ್ಷೆಗಷ್ಟೇ ಸೀಮಿತಗೊಳಿಸಿ, ಅಂಕ ಗಳಿಕೆ ಬಗ್ಗೆ ತೋರಿದಷ್ಟು ಆಸಕ್ತಿಯನ್ನು ನಿಜ ಜೀವನದ ಸಾಧನೆಗೆ ಬಳಸಿಕೊಳ್ಳುವಲ್ಲಿ ಅಷ್ಟಾಗಿ ಗಮನ ಕೊಡುತ್ತಿಲ್ಲ ಎಂದರು.

ಭವಿಷ್ಯದ ವಿಶ್ವವನ್ನೇ ಆಳುವ ಅವಕಾಶ ಭಾರತದ ಯುವಶಕ್ತಿಗೆ ಒದಗಿ ಬರುವ ಕಾಲ ಸನ್ನಿಹಿತವಾಗ ಬಹುದು. ಇದಕ್ಕಾಗಿ ನಮ್ಮ ವಿದ್ಯಾರ್ಥಿಗಳು ಪಡೆದ ಶಿಕ್ಷಣವನ್ನು ಜ್ಞಾನವನ್ನಾಗಿಯೂ, ಜ್ಞಾನವನ್ನು ಕೌಶಲ್ಯವನ್ನಾಗಿಯೂ ಪರಿವರ್ತಿಸಿಕೊಳ್ಳಲೇಬೇಕೆಂದು ಒತ್ತಿ ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಭರಮಸಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಮ್ಮ ಕರಿಬಸಪ್ಪ ಅವರು, ಈ ಭಾಗದಲ್ಲಿ ಯಾರೂ ಪ್ರತಿಭಾ ಪುರಸ್ಕಾರ ಮಾಡುತ್ತಿಲ್ಲ. ಪುರಸ್ಕೃತ ವಿದ್ಯಾರ್ಥಿಗಳು ಉನ್ನತಿಗೆ ಹೋಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಎಸ್.ಎಲ್.ಎಂ. ವಿದ್ಯಾಸಂಸ್ಥೆ ಮುಖ್ಯಸ್ಥ ಪ್ರವೀಣ್ ಅವರು, ಸಂಘಟನೆ ಹಾಗೂ ಕಾರ್ಯಕ್ರಮ ನಿರ್ವಹಣೆ ಸುಲಭವಲ್ಲ. ಸದುದ್ದೇಶದ ಕೆಲಸದಿಂದ ಆತ್ಮತೃಪ್ತಿ ಹಾಗೂ ಯಶಸ್ಸು ಸಾಧ್ಯ ಎಂದರು.

ವೆಂಕಟಾದ್ರಿ ಶ್ರೇಷ್ಠಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಓಂಕಾರಪ್ಪ, ಯೋಗ ಶಿಕ್ಷಕ ತಿಪ್ಪೇಸ್ವಾಮಿ ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ಓಂಕಾರಪ್ಪ, ಪ್ರಗತಿಪರ ರೈತ ಎಂ.ಎನ್. ಯಶಸ್, ಕನ್ನಡ ಉಪನ್ಯಾಸಕ ಹೆಚ್.ಎಂ.ಆರ್. ಸ್ವಾಮಿ, ಸ್ಥಳೀಯ ರೋಟರಿ ಕ್ಲಬ್ ಅಧ್ಯಕ್ಷ, ಅಡಿಕೆ ವರ್ತಕ ಸಿ.ಟಿ. ಮಹಾಂತೇಶ, ಭರಮಸಾಗರ ಬಾಪೂಜಿ ಹೈಸ್ಕೂಲ್ ಮುಖ್ಯೋಪಾಧ್ಯಾಯ ಜಿ.ಸಿ. ಎಚ್ ಗೊಂಜಿಗಾರ್ ಮಾತನಾಡಿದರು.

ಬಿಜೆಪಿ ಹಿರಿಯ ಕಾರ್ಯಕರ್ತ ಎ.ಎಸ್. ಸಿದ್ದಲಿಂಗಪ್ಪ, ಪಿ ಲೀಲಾಕೃಷ್ಣ, ಎಸ್. ಪ್ರಕಾಶ್ ಮೂರ್ತಿ, ಬಿ.ಎಸ್. ವೆಂಕಟಾದ್ರಿ, ಶೆಟ್ಟಿ, ಧಾರ್ಮಿಕ ಚಿಂತಕ ಬಿ. ದತ್ತಾತ್ರಿ, ಎನ್.ಟಿ. ಬಸವರಾಜ್, ಅಮ್ಮುಂದಿ ಮನೆಯವರು, ನಂದಿಹಳ್ಳಿ ರಾಮಪ್ಪ, ಪಾರ್ವತಮ್ಮ, ಲತಾ, ಕವಿತಾ, ಪ್ರತಿಭಾ, ಡಿವಿಎಸ್ ವಿದ್ಯಾಸಂಸ್ಥೆಯ ಶಿಕ್ಷಕರು, ಗ್ರಾಪಂ ಸದಸ್ಯ ಜಂಬುಲಿಂಗಪ್ಪ, ಬ್ಯಾಂಕ್ ರುದ್ರಪ್ಪ, ಗಣೇಶ್ ಇನ್ನೂ ಇತರರು ಇದ್ದರು.

ಸನ್ಮಾನಿತ ವಿದ್ಯಾರ್ಥಿಗಳಿಗೆ ಶಾಲು, ಹಾರ, ಪುಸ್ತಕ, ಶಾರದ ಪುರಸ್ಕಾರ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮಕ್ಕೆ ವೈಯಕ್ತಿಕವಾಗಿ ಹೆಚ್.ಪಿ. ಗ್ಯಾಸ್ ಮಾಲೀಕ ಡಿ.ಎಸ್. ನಾಗಭೂಷಣ, ದಿ|| ಶ್ರೀಮತಿ ಪಾರ್ವತಮ್ಮ ಶೇಖರಪ್ಪ ಮತ್ತು ಮಕ್ಕಳು, ಗ್ರಾಪಂ ಮಾಜಿ ಅಧ್ಯಕ್ಷ ಶಮೀಮ್ ಪಾಷಾ, ದಾವಣಗೆರೆಯ ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಶ್ರೀಮತಿ ಚೇತನ ಶಿವಕುಮಾರ್ ಅವರು ಸಹಕಾರ ನೀಡಿ ಪ್ರೋತ್ಸಾಹಿಸಿದ್ದರು.

ಶ್ರೀಮತಿ ಗಾಯತ್ರಿ ಪ್ರಾರ್ಥಿಸಿದರು. ಪವಮಾನ ಪ್ರತಿಷ್ಠಾನದ ರೂವಾರಿ, ಹಿರಿಯ ಪತ್ರಕರ್ತ ಬಿ.ಜಿ. ಅನಂತಪದ್ಮನಾಭ ಸ್ವಾಗತಿಸಿದರು. ಅಂಜನಾ ಕಾರ್ಯಕ್ರಮ ನಿರೂಪಿಸಿದರು. ಅಕ್ಷತಾ ವಂದಿಸಿದರು.

# ಬಿ.ಎಸ್ಸಿ ಭಾರತದಲ್ಲಿ ಅತ್ಯಂತ ಜನಪ್ರಿಯ ಪದವಿಗಳಲ್ಲೊಂದು




**ಹರಪನಹಳ್ಳಿ ಕಾರ್ಯಕ್ರಮದಲ್ಲಿ ರೇವು ವಿಶ್ವವಿದ್ಯಾಲಯದ ಗಣಿತ ವಿಭಾಗದ ಮುಖ್ಯಸ್ಥ ಡಾ.ಎಂ. ವಿಶುಕುಮಾರ**

ಹರಪನಹಳ್ಳಿ, ಜೂ.26- ಬ್ಯಾಚುಲರ್ ಆಫ್ ಸೈನ್ಸ್ ಭಾರತದಲ್ಲಿ ಅತ್ಯಂತ ಜನಪ್ರಿಯ ಪದವಿಗಳಲ್ಲಿ ಒಂದಾಗಿದೆ ಎಂದು ರೇವು ವಿಶ್ವವಿದ್ಯಾಲಯದ ಗಣಿತ ವಿಭಾಗದ ಮುಖ್ಯಸ್ಥ ಡಾ.ಎಂ. ವಿಶುಕುಮಾರ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಿಂದ ಬಿ.ಎಸ್ಸಿ. ವಿದ್ಯಾರ್ಥಿಗಳಿಗೆ ಪದವಿ ನಂತರ ಮುಂದಿನ ಶಿಕ್ಷಣದ ಕುರಿತು ಆತ್ಮ ವಿಶ್ವಾಸ ತುಂಬುವ ವಿಶೇಷ ಉಪನ್ಯಾಸ ನೀಡಿದರು.

ವಿವಿಧ ವೃತ್ತಿಪರ ಆಯ್ಕೆಗಳಿಗೆ ಬಿ.ಎಸ್ಸಿ. ಕಾರಣವಾಗುತ್ತದೆ. ಉನ್ನತ ಶಿಕ್ಷಣಕ್ಕಾಗಿ ವಿವಿಧ ವಿಷಯದ ಆಯ್ಕೆಗಳನ್ನು ಹೊಂದಬಹುದು. ನಿಮ್ಮ ವೃತ್ತಿ ಜೀವನದಲ್ಲಿ ಮುನ್ನಡೆಯಲು ಎಂ.ಎಸ್ಸಿ. ಪದವಿಯನ್ನು ಸಾಮಾನ್ಯವಾಗಿ ಆಯ್ಕೆ ಮಾಡಿಕೊಳ್ಳಬಹುದು. ಜೊತೆಗೆ ಬಿ.ಇಡಿ. ಮಾಡಬಹುದು ಎಂದು ಸಲಹೆ ನೀಡಿದರು.

ಪ್ರಾಧ್ಯಾಪಕ ಡಾ.ಬಿ.ಎನ್. ಹನುಮಗೌಡ ಮಾತನಾಡಿ, ಬಿ.ಎಸ್ಸಿ. ಪದವಿ ನಂತರ ಡೇಟಾ ಸೈನ್ಸ್ ಡೇಟಾ ದೃಶ್ಯೀಕರಣ, ಹಣಕಾಸು ಎಂಜಿನಿಯರಿಂಗ್ ಮತ್ತು ಕೃತಕ ಬುದ್ದಿಮತ್ತೆ, ನೈಸರ್ಗಿಕ ಭಾಷಾ ಸಂಸ್ಕರಣೆ, ಪೈಥಾನ್. ಹಾಸ್ಪಿಟಾಲಿಟಿ ಮ್ಯಾನೇಜ್ ಮೆಂಟಿನಲ್ಲಿ ಎಂ.ಬಿ.ಎ. ಮಾಹಿತಿ ತಂತ್ರಜ್ಞಾನದಲ್ಲಿ ಎಂ.ಬಿ.ಎ. ಬಿ.ಸಿ.ಎ. ಎಂ.ಸಿ.ಎ ಮಾಡಬಹುದು. ನೀವು ಸ್ವಂತ ವೃತ್ತಿ ಮಾಡಬೇಕು ಎಂದರೆ ತೈಲ ಉದ್ಯಮ.

ಕೃಷಿ ಉದ್ಯಮ, ಶಿಕ್ಷಣ ಸಂಸ್ಥೆಗಳು. ಆಹಾರ ಸಂಸ್ಥೆಗಳು, ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳು ಸೇರಿದಂತೆ ಅನೇಕ ತರಹದ ಸ್ವ ಉದ್ಯೋಗಗಳನ್ನು ಮಾಡುವ ಮೂಲಕ ಸ್ವಾವಲಂಬನಿಯಾಗಿ ಇರಬಹುದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಸ್. ಷಣ್ಮುಖನಗೌಡ, ನಾನೂ ಕೂಡ ವಿಜ್ಞಾನದ ವಿದ್ಯಾರ್ಥಿಯಾಗಬೇಕು ಎಂದು ತುಂಬಾ ಪ್ರಯತ್ನ ಮಾಡಿದರೂ ಆಗಲಿಲ್ಲ. ಅದರೂ ಕೂಡ ಸೈನ್ಸ್ ವಿದ್ಯಾರ್ಥಿಗಳೆಂದರೆ ನನಗೆ ತುಂಬಾ ಇಷ್ಟ. ನೀವುಗಳು ಸ್ವ ಉದ್ಯೋಗ ಮಾಡಲು ಅನೇಕ ಅವಕಾಶಗಳಿವೆ ಎಂದರು.

ಈ ವೇಳೆ ಪ್ರಾಧ್ಯಾಪಕ ಡಾ.ಬಿ.ಟಿ. ರಾಜು, ಸಹಾಯಕ ಪ್ರಾಧ್ಯಾಪಕ ಡಾ.ಜೆ.ಸಂತೋಷಕುಮಾರ್, ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ತಿಪ್ಪೇಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಎಚ್.ಕೊಟ್ರೇಶ್, ಉಪನ್ಯಾಸಕರಾದ ನಾಗರಾಜ, ಕೆ.ಸತೀಶ, ಶಂಭುಲಿಂಗಪ್ಪ, ಗ್ರಂಥಪಾಲಕರಾದ ನಾಗರತ್ನ ಹೊಸಮನಿ ಸೇರಿದಂತೆ, ಇತರರು ಇದ್ದರು.

# ಇಂದಿನಿಂದ ದಾವಣಗೆರೆ ಮಾರ್ಗವಾಗಿ 'ವಂದೇ ಭಾರತ್' ರೈಲು ಆರಂಭ



ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬೆಂಗಳೂರಿನಿಂದ ದಾವಣಗೆರೆ ಮಾರ್ಗವಾಗಿ ಧಾರವಾಡ ಸಂಚಾರಕ್ಕೆ ಸಜ್ಜಾಗಿದ್ದು, ಇಂದು ಬೆಳಿಗ್ಗೆ 11 ಗಂಟೆಗೆ ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯಿಂದ ವರ್ಚುವಲ್ ಮೂಲಕ ಹಸಿರು ನಿಶಾನೆ ತೋರಿಸಲಿದ್ದಾರೆ ಎಂದು ನೈರುತ್ಯ ರೈಲ್ವೆ ಮುಖ್ಯ ವಾಣಿಜ್ಯ ನಿರೀಕ್ಷಕ ಬಿ.ವಿ. ರಾಕೇಶ್ ತಿಳಿಸಿದ್ದಾರೆ.

ಧಾರವಾಡದಿಂದ ಹೊರಟು ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ಆಗಮಿಸಲಿದ್ದು, ಈ ಸಂದ ರ್ಭದಲ್ಲಿ ದಾವಣಗೆರೆ ರೈಲು ನಿಲ್ದಾಣದಲ್ಲಿ ಸ್ವಾಗತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅತ್ಯಾಧುನಿಕ ಅತಿ ವೇಗ ಹಾಗೂ ವಿಶ್ವಮಟ್ಟದ ಸವಲತ್ತುಗಳಿಂದ ರೂಪಿಸಲಾಗಿರುವ ಭಾರತೀಯ ರೈಲ್ವೆಯ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ನಿತ್ಯ ಬೆಂಗಳೂರು-ಧಾರವಾಡ ಮಧ್ಯೆ ಸಂಚಾರ ಮಾಡಲಿದ್ದು, ಯಶವಂತಪುರ, ದಾವಣಗೆರೆ ಮತ್ತು ಹುಬ್ಬಳ್ಳಿಯಲ್ಲಿ ನಿಲುಗಡೆ ಹೊಂದಿದೆ ಎಂದು ಅವರು ವಿವರಿಸಿದ್ದಾರೆ.

# ಫ್ರಾನ್ಸ್ ವಿಮಾನ ರದ್ದತಿಯಿಂದ ಭಾರತೀಯರಿಗೆ ಸಮಸ್ಯೆ

ನವದೆಹಲಿ ಜೂ. 26 – ತಾಂತ್ರಿಕ ಕಾರಣಗಳಿಂದಾಗಿ ಪ್ಯಾರಿಸ್‌ನಿಂದ ಟೊರಂಟೊಗೆ ತೆರಳಬೇಕಿದ್ದ ವಿಮಾನವನ್ನು ರದ್ದುಗೊಳಿಸಲಾಗಿದೆ. ಇದಕ್ಕೆ ಬದಲಾಗಿ ಹೊಸ ವಿಮಾನ ಸಹ ಲಭ್ಯವಿಲ್ಲ ಎಂದು ಏರ್ ಫ್ರಾನ್ಸ್ ತಿಳಿಸಿದೆ. ಇದರಿಂದಾಗಿ ಭಾರತೀಯರೂ ಸೇರಿದಂತೆ ಹಲವರು ಪ್ಯಾರಿಸ್ ವಿಮಾನ ನಿಲ್ದಾಣದಲ್ಲಿ ಅತಂತ್ರರಾಗಿದ್ದಾರೆ.

ಸಂಪರ್ಕ ವಿಮಾನಕ್ಕಾಗಿ ಹಲವರು ಪ್ಯಾರಿಸ್‌ಗೆ ತೆರಳಿದ್ದರು. ಮುಂದಿನ ಪ್ರಯಾಣ ಸಾಧ್ಯವಾಗದೇ ಹಲವರು ಟ್ವಿಟ್ಟರ್ ಮೂಲಕ ತಮ್ಮ ಸಮಸ್ಯೆ ಹೇಳಿಕೊಂಡಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿರುವ ಏರ್ ಫ್ರಾನ್ಸ್, ಆದಷ್ಟು ಶೀಘ್ರ ಪ್ರಯಾಣಿಕರನ್ನು ಅವರ ನಿಲ್ದಾಣಗಳಿಗೆ ಕಳಿಸಲಾಗುವುದು ಎಂದು ಹೇಳಿದೆ.

# ನಗರದಲ್ಲಿ ಇಂದು ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ದಾವಣಗೆರೆ, ಜೂ. 26- ಆರೋಗ್ಯ ಇಲಾಖೆಯ ಇ-ಸರ್ವೆಯಿಂದ ಮುಕ್ತಗೊಳಿಸು ವುದು ಸೇರಿದಂತೆ, ವಿವಿಧ ಬೇಡಿಕೆಗಳ ಈಡೇರಿ ಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 27 ರ ಮಂಗಳವಾರ ಬೆಳಿಗ್ಗೆ 11 ಕ್ಕೆ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ನಂತರ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ಫೆಡರೇಷನ್ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಫೆಡರೇಷನ್ ಪದಾಧಿ ಕಾರಿಗಳಾದ ಎಸ್.ಎಸ್. ಮಲ್ಲಮ್ಮ, ವಿಶಾಲಾಕ್ಷಿ, ಕೆ.ಸಿ. ನಿರ್ಮಲ, ಗೀತಾ, ಸರ್ವಮ್ಮ, ಆವರಗೆರೆ ವಾಸು, ರೇಣುಕಮ್ಮ, ಸುಧಾ ಉಪಸ್ಥಿತರಿದ್ದರು.

# ಅ.1ರಂದು ಬೆಳಗಾವಿಯಲ್ಲಿ ಪುಟ್ಟರಾಜ ಸೇವಾ ಸಮಿತಿ ಭಕ್ತಿ ಸಾಹಿತ್ಯ ಸಮ್ಮೇಳನ



ದಾವಣಗೆರೆ, ಜೂ.26 - ಗದುಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ನಡೆಸಲಾಗುವ ರಾಜ್ಯಮಟ್ಟದ 6ನೇ ಭಕ್ತಿ ಸಾಹಿತ್ಯ ಸಮ್ಮೇಳನವನ್ನು ಅಕ್ಟೋಬರ್ 1ರಂದು ಬೆಳಗಾವಿಯಲ್ಲಿ ನಡೆಸಲು ಮೊನ್ನೆ ನಗರದಲ್ಲಿ ಜರುಗಿದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ತೀರ್ಮಾನ ತಗೆದುಕೊಳ್ಳಲಾಯಿತು ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಬಸಯ್ಯ ಚರಂತಿಮಠ ತಿಳಿಸಿದ್ದಾರೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ವೇ. ಚನ್ನವೀರಸ್ವಾಮಿ ಹಿರೇಮಠ (ಕಡಣಿ) ರವರು ಮಾತನಾಡಿ, ಪೂಜ್ಯ ಗುರು ಪುಟ್ಟರಾಜರು ತ್ರಿಭಾಷಾ ಕವಿಗಳಾಗಿ ಅನೇಕ ಕೃತಿಗಳನ್ನು ರಚಿಸಿ ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಗೆ ಅನುಪಮ ಸೇವೆ ಸಲ್ಲಿಸಿದ್ದಾರೆ. ಪೂಜ್ಯರ ಭಕ್ತಿ ಸಾಹಿತ್ಯ ಸೇವೆಯ ಸ್ಮರಣೆಗಾಗಿ ಮತ್ತು ಭಕ್ತಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಯುವ ಕವಿ, ಸಾಹಿತಿಗಳಿಗೆ ವೇದಿಕೆ ನೀಡುವ ಮತ್ತು ಅವರ ಸಾಧನೆಯನ್ನು ಸ್ಮರಿಸುವ ಕಾರ್ಯ ಪ್ರತಿ ವರ್ಷವೂ ರಾಜ್ಯದ ಬೇರೆ ಬೇರೆ ಜಿಲ್ಲಾ ಕೇಂದ್ರದಲ್ಲಿ ಹಮ್ಮಿಕೊಳ್ಳುತ್ತಾ ಬಂದಿರುತ್ತದೆ.

5ನೆಯ ಭಕ್ತಿ ಸಾಹಿತ್ಯ ಸಮ್ಮೇಳನವನ್ನು ಇದೇ ದಾವಣಗೆರೆ ಮಹಾ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಂದಿನ ಸಮಾರೋಪ ಸಮಾರಂಭದಲ್ಲಿಯೇ ಮುಂದಿನ ಸಮ್ಮೇಳನ ಸ್ಥಳ ಮತ್ತು ದಿನಾಂಕ ಘೋಷಣೆ ಮಾಡಬೇಕಾಗಿತ್ತು. ಆದರೆ ಹಾವೇರಿ, ಶಿವಮೊಗ್ಗ ಮತ್ತು ಬೆಳಗಾವಿ ಈ ಮೂರು ನಗರಗಳಲ್ಲಿ ಒಂದು ನಗರ ಆಯ್ಕೆ ಮಾಡುವಲ್ಲಿ ಅಂತಿಮ ತೀರ್ಮಾನಕ್ಕೆ ಬಾರದೆ, ಮುಂದೆ ಮತ್ತೊಮ್ಮೆ ಯೋಚಿಸಿ ರಾಜ್ಯ ಕಾರ್ಯಕಾರಿಣಿ ಮಂಡಳಿ ಸಭೆ ಸೇರಿ ತೀರ್ಮಾನಿಸಲು ಯೋಚಿಸಿ ಮುಂದೂಡಲಾಗಿತ್ತು.

ಅದರಂತೆ ಹಿಂದಿನ ಸಮ್ಮೇಳನ ನಡೆದ ನಗರದಿಂದಲೇ ಅಧಿಕೃತ ಘೋಷಣೆ ಮಾಡಬೇಕು ಎಂಬ ಸಂಕಲ್ಪದಂತೆ ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ದಾವಣಗೆರೆ ಜಿಲ್ಲಾ ಘಟಕ ಮತ್ತು ಮಹಿಳಾ ಘಟಕಗಳ ಉದ್ಘಾಟನಾ ಸಮಾರಂಭದಲ್ಲಿ ಈ ಘೋಷಣೆ ಮಾಡಲಾಯಿತು ಎಂದು ಚನ್ನವೀರ ಸ್ವಾಮಿ ಹೇಳಿದರು.

ಸಮ್ಮೇಳನ ಇನ್ನಷ್ಟು ಅರ್ಥಪೂರ್ಣವಾಗಿ ಹಮ್ಮಿಕೊಳ್ಳುವುದು ಭಕ್ತಿ ಸಾಹಿತ್ಯಕ್ಕೆ ಸಂಬಂಧಿಸಿದ ಗೋಷ್ಠಿ, ವಚನ ಗೋಷ್ಠಿ, ವಚನ ಗಾಯನ, ವಚನ ನೃತ್ಯ ಕಾರ್ಯಕ್ರಮಗಳೊಂದಿಗೆ, ಪುಟ್ಟರಾಜ ಸಾಹಿತ್ಯ ಪುರಸ್ಕಾರ, ವಾರ್ಷಿಕ ಪ್ರಶಸ್ತಿ ಪ್ರದಾನ ಮೊದಲಾದ ಕಾರ್ಯಕ್ರಮ ಆಯೋಜಿಸುವ ಉದ್ದೇಶವಿದೆ ಎಂದು ಹೇಳಿದರು. ಪುಟ್ಟರಾಜ ಸೇವಾ ಸಮಿತಿಯ ಜಿಲ್ಲಾ ಅಧ್ಯಕ್ಷ ಪಿ.ಬಿ ವಿನಾಯಕ ಸ್ವಾಗತಿಸಿದರು. ಎಂ.ಕೆ. ರೇವಣಸಿದ್ಧಪ್ಪ, ವಿಕ್ರಮ ವಿ. ಜೋಷಿ. ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಸತೀಶ್ ಧಾರವಾಡ, ಉಪಾಧ್ಯಕ್ಷೆ ವನಜಾ ಮಹಾಲಿಂಗಯ್ಯ, ಮಮತಾ ನಾಗರಾಜ, ಹಾಲೇಶ, ಮಂಜುಳಾ ಕೆ.ಇ., ದಾಕ್ಷಾಯಣಿ ಹೆಚ್.ಎ., ಅಭಿಷೇಕ್ ಎಸ್. ಆರ್. ಪುಷ್ಪ ವೀರೇಶ, ಆಂಜನೇಯ ಡಿ. ಹೆಚ್., ಮಧುಮತಿ ಗಿರೀಶ್ ದೇವಿಗೆರೆ, ರಾಜಶ್ರೀ ಆರ್.ಎಸ್. ಸಿ.ಜೆ.ಶಾಂತ ಶಿವಶಂಕರ್. ತನುಜಾ ಶ್ರೀನಾಥ ಬೆಳ್ಳುಳ್ಳಿ, ಲತಾ ಮಂಜುನಾಥ ಕಪ್ಪಾಳಿ, ಶಶಿಕಲಾ ಎಚ್.ಎಸ್. ಶಾನ್ವಿ ಆರ್. ಮೊದಲಾದವರು ಉಪಸ್ಥಿತರಿದ್ದರು.

# ಮೌನ ಇಚ್ಛಾಶಕ್ತಿಯನ್ನು ಗಟ್ಟಿಗೊಳಿಸುತ್ತದೆ



**ಶ್ರೀ ಬಸವ ಪ್ರಭು ಸ್ವಾಮೀಜಿ ಪ್ರತಿಪಾದನೆ**

ಚಿತ್ರದುರ್ಗ, ಜೂ.26- ಶ್ರೀ ಮುರುಘಾ ಮಠದಲ್ಲಿ ಮುಂಜಾನೆ ಶ್ರೀ ಬಸವಪ್ರಭು ಸ್ವಾಮೀಜಿ ಕರ್ತೃ ಶ್ರೀ ಗುರು ಮುರುಘೇಶನಿಗೆ ಪೂಜೆ ಸಲ್ಲಿಸಿ, ಮೌನವನ್ನು ಸಮಾಪ್ತಿ ಮಾಡಿದರು. ನಂತರ ಸರಳ ಸಮಾರಂಭವು ರಾಜಾಂಗಣದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಶ್ರೀ ಬಸವಪ್ರಭು ಸ್ವಾಮೀಜಿ, ಮಠದ ಸಂಕಷ್ಟಗಳ ನಿವಾರಣೆಗಾಗಿ ಒಂದು ದಿನದ ಮೌನಾಚರಣೆ ಮಾಡಲಾಯಿತು. ಮೌನ ಒಂದು ದೊಡ್ಡ ಶಕ್ತಿ. ಅದು ನಮ್ಮೊಳಗಿರುವ ಇಚ್ಛಾಶಕ್ತಿಯನ್ನು ಮತ್ತಷ್ಟು ಗಟ್ಟಿಯಾಗಿಸುತ್ತದೆ. ಅಸಾಧ್ಯವಾದ ಕಾರ್ಯವನ್ನು ಸಾಧ್ಯ ಮಾಡಲು ಮೌನ ಒಂದು ಶಕ್ತಿಯಾಗಿ ನಮಗೆ ಕಾರ್ಯಗಳನ್ನು ಸಾಧಿಸಲು ಸ್ಫೂರ್ತಿಯನ್ನು ನೀಡುತ್ತದೆ, ಹಾಗಾಗಿ ಜೀವನದಲ್ಲಿ ಪ್ರತಿಯೊಬ್ಬರೂ ಮೌನವಾಗಿರುವ ಅಭ್ಯಾಸವನ್ನು ಮಾಡಬೇಕು. ವಿದ್ಯಾರ್ಥಿಗಳು ನೀವು ಸಮಯ ಸಿಕ್ಕಾಗ ಸ್ವಲ್ಪ ಸಮಯ ಮೌನವಾಗಿರುವ ಪದ್ಧತಿಯನ್ನು ಅಳವಡಿಸಿಕೊಂಡರೆ ನಿಮಗೆ ಏಕಾಗ್ರತೆ ಹೆಚ್ಚುತ್ತದೆ. ಅಷ್ಟೇ ಅಲ್ಲದೇ ನಿಮಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿ ಚೆನ್ನಾಗಿ ಓದುವ ಅಭಿರುಚಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಮೌನ ಜೀವನದ ಅನೇಕ ಸಮಸ್ಯೆಗಳನ್ನು ಪರಿಹರಿಸುವ ಔಷಧಿಯಾಗಿದೆ ಎಂದರು. ವಿದ್ಯಾರ್ಥಿಗಳು ಸಹ ಗುರುವಿನಂತೆ ಒಂದು ನಿಮಿಷಗಳ ಕಾಲ ಮೌನವಾಗಿದ್ದರು.

ಈ ಸಂದರ್ಭದಲ್ಲಿ ವಕೀಲ ಪ್ರತಾಪ್ ಜೋಗಿ ಅವರು ಶ್ರೀಮಠದ ವಿದ್ಯಾರ್ಥಿಗಳಿಗೆ ಮಾವಿನ ಹಣ್ಣುಗಳನ್ನು ಹಂಚಿದರು. ಸಮಾರಂಭದಲ್ಲಿ ಶ್ರೀ ಬಸವಾದಿತ್ಯ ದೇವರು, ಶ್ರೀ ಮುರುಗೇಂದ್ರ ಸ್ವಾಮೀಜಿ , ನಿಪ್ಪಾಣಿಯ ಶ್ರೀ ಬಸವ ಮಲ್ಲಿಕಾರ್ಜುನ ಸ್ವಾಮೀಜಿ, ಗುರುಕುಲದ ಸಾಧಕರು, ಎಂ.ಗಿರಿಸುವರ್ಣಮ್ಮ, ವಕೀಲರಾದ ಸೌಮ್ಯ, ಅಶ್ವಿನಿ , ಮಲ್ಲಿಕಾರ್ಜುನ್, ವಸಂತ್ ಉಪಸ್ಥಿತರಿದ್ದರು.

# ಎಂಎಸ್‌ಬಿಯಲ್ಲಿ ಇಂದು ಪ್ರತಿಭಾ ಪುರಸ್ಕಾರ

ದಾವಣಗೆರೆ: ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ 2022-23ನೇ ಸಾಲಿನ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಸಾಂಪ್ರದಾಯಿಕ ದಿನ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಸಿ. ನೀಲಾಂಬಿಕಾ ಅವರ ಅಧ್ಯಕ್ಷತೆಯಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಮಾಗನೂರು ಸಂಗಮೇಶ್ವರ ಗೌಡ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ದಾ.ವಿ.ವಿ ಪರೀಕ್ಷಾಂಗ ವಿಭಾಗದ ಕುಲಸಚಿವ ಕೆ. ಶಿವಶಂಕರ್, ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಎಚ್. ಮುರಿಗೇಂದ್ರಪ್ಪ ಪಾಲ್ಗೊಳ್ಳಲಿದ್ದಾರೆ. ಐ.ಕ್ಯೂ.ಎ.ಸಿ. ಸಂಯೋಜಕ ಡಾ. ವಿಜಯಕುಮಾರ್, ಡಾ. ಎಂ. ಮಂಜಪ್ಪ ಉಪಸ್ಥಿತರಿರುವರು.

# ದೈವಜ್ಞ ವಿದ್ಯಾ ಸಂಸ್ಥೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ.26- ನಗರದ ದೈವಜ್ಞ ವಿದ್ಯಾ ಸಂಸ್ಥೆಯ ಆವರಣದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಅರ್ಥಪೂರ್ಣ ವಾಗಿ ಆಚರಿಸಲಾಯಿತು. ಶಾಲೆಯ ಹಿರಿಯ ಶಿಕ್ಷಕಿ ಆಶಾ ಬಂಡಿಗೇರಿ ಯವರು ಮಕ್ಕಳಿಗೆ ಯೋಗಾಭ್ಯಾಸದ ಜೊತೆ ಯೋಗದ ಮಹತ್ವವನ್ನು ವಿವರಿಸಿದರು.

ಸೂರ್ಯ ನಮಸ್ಕಾರ, ಪ್ರಾಣಾಯಾಮ ಹಾಗೂ ಯೋಗಾಸನ ಭಂಗಿಗಳನ್ನು ವಿದ್ಯಾರ್ಥಿಗಳಿಂದ ಮಾಡಿಸಿದರು. ಶಾಲೆಯ ಬೋಧಕ ಮತ್ತು ಬೋಧಕೇತರ ವರ್ಗದ ವರು ಯೋಗಾಭ್ಯಾಸದಲ್ಲಿ ತೊಡಗಿಕೊಳ್ಳುವ ಮೂಲಕ ಯೋಗದ ಮಹತ್ವವನ್ನು ಮಕ್ಕಳಿಗೆ ಮನವರಿಕೆ ಮಾಡಿದರು. ಹಾಗೆಯೇ ಪ್ರತಿ ಶನಿವಾರ ಬೆಳಿಗ್ಗೆ ಮಕ್ಕಳಿಗೆ ಯೋಗಾಸನ ತರಬೇತಿಯನ್ನು ನೀಡುವ ಬಗ್ಗೆಯೂ ಪ್ರಸ್ತಾಪಿಸಲಾಯಿತು.

ಕಾರ್ಯದರ್ಶಿ ಯೋಗರಾಜ್ ಆರ್. ಅಣ್ವೇಕರ್ ಮಾತನಾಡಿ, ಬೇಕರಿ ಪದಾರ್ಥ ಗಳು ಹಾಗೂ ತಂಪು ಪಾನೀಯಗಳಿಂದ ದೂರ ಇರುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು ಮತ್ತು ಉತ್ತಮ ಪೌಷ್ಠಿಕ ಆಹಾರದ ಬಗ್ಗೆ ತಿಳಿಹೇಳಿದರು.

ಮುಖ್ಯೋಪಾಧ್ಯಾಯಿನಿ ಪದ್ಮಾವತಿ ವೆರ್ಣೇಕರ್ ಯೋಗಾಸನ ಶಿಬಿರದಲ್ಲಿ ಪಾಲ್ಗೊಂಡ ಶಿಕ್ಷಕ-ಶಿಕ್ಷಕಿಯರನ್ನು, ಮಕ್ಕಳನ್ನು ಅಭಿನಂದಿಸಿದರು.

# ದೇಶದ ಆಸ್ತಿಯಾಗಿಸಿ

**(1ನೇ ಪುಟದಿಂದ)** ಕಾರ್ಯಕ್ರಮಕ್ಕೆ ಶಾಸಕ ಬಿ. ದೇವೇಂದ್ರಪ್ಪ ಅವರನ್ನು ಆಹ್ವಾನಿಸಲಾಗಿತ್ತು.ಯಾವುದೇ ಪಕ್ಷದಿಂದ ಗೆಲ್ಲಲಿ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನನ್ನ ಸಂಪೂರ್ಣ ಸಹಕಾರವಿದೆ ಎಂದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ನಾನು ಸೋತಿರಬಹುದು, ಕ್ಷೇತ್ರದ ಜನತೆಯ ಮೇಲಿನ ಅಭಿಮಾನ ಕುಂದಿಲ್ಲ. ನನ್ನ ಆಡಳಿತಾವಧಿಯಲ್ಲಿ ಮಂಜೂರಾದ ಮನೆಗಳನ್ನು ಯಾವುದೇ ಮಧ್ಯವರ್ತಿಗಳು ಫಲಾನುಭವಿಗಳಿಂದ ಲಂಚ ಪಡೆಯದೆ ಪಾರದರ್ಶಕವಾಗಿ ನೀಡಬೇಕು ಎಂದು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಚಂದ್ರಶೇಖರ್, ವಿವಿಧ ಗ್ರಾ.ಪಂ.ಗಳ ಅಧ್ಯಕ್ಷರಾದ ರೇಣುಕಮ್ಮ ಸಿದ್ದಪ್ಪ, ಪವಿತ್ರಾ ವೀರೇಶ್, ರೇಖಾ ರಾಜ್‌ಕುಮಾರ್, ಬಸವರಾಜ್, ಉಪಾಧ್ಯಕ್ಷೆ ನಾಗಮ್ಮ, ಸದಸ್ಯರಾದ ವೀರೇಶ್, ರೇಖಾ, ಬಿಜೆಪಿ ಮಂಡಲ ಅಧ್ಯಕ್ಷ ಎಚ್. ಸಿ.ಮಹೇಶ್, ಜಿ.ಪಂ.ಮಾಜಿ ಸದಸ್ಯ ಎಸ್.ಕೆ. ಮಂಜುನಾಥ್, ವಿವಿಧ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ವಿವಿಧ ಗ್ರಾಮಪಂಚಾಯಿತಿಗಳ ಪಿಡಿಓ ಗಳು ಭಾಗವಹಿಸಿದ್ದರು.

# ಪ್ರಥಮ ವರ್ಷದ ಪುಣ್ಯಸ್ಮರಣೆ



## ಶ್ರೀಮತಿ ಕಮಲಮ್ಮನವರು

ನಿಧನ : 27.06.2022

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.*
*ಸದಾ ನಿಮ್ಮ ಸ್ಮರಣೆಯಲ್ಲಿ ಹೆಜ್ಜೆ - ಹೆಜ್ಜೆಗೂ ನಿಮ್ಮ ನೆನಪುಗಳ ಸ್ಫೂರ್ತಿಯೊಂದಿಗೆ ಮುನ್ನಡೆಯುತ್ತಿದ್ದೇವೆ.*
*ಜೀವನದ ಎಲ್ಲಾ ಹಂತಗಳಲ್ಲೂ ನಿಮ್ಮ ಅಸ್ತಿತ್ವದ ಅನುಭೂತಿ ನಮಗೆ ದೊರೆಯುತ್ತಿದೆ. ಎಂದೆಂದಿಗೂ ನೀವೇ ನಮಗೆ ದಾರಿ ದೀಪ ಮತ್ತು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿ-ಶಾಶ್ವತವಾಗಿ ಕಂಗೊಳಿಸುತ್ತಿರುವಿರಿ.*
*ಸದಾ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ*

**ಶ್ರೀಮತಿ ಮಾಲಾ ಶ್ರೀ ಶಿವಮೂರ್ತಿ ಮತ್ತು ಚಿ|| ವಿನಯ್, ಡಾ. ಸೌಮ್ಯ, ಚಿ|| ವಿಕ್ಕಿ ಹಾಗೂ ಅಡಾಣಿ ವಂಶಸ್ಥರು ಹಾಗೂ ಬಂಧು-ಮಿತ್ರರು.**

**ನೇತ್ರದಾನ ಮಹಾದಾನ**

## ಅನ್ನಪೂರ್ಣಮ್ಮ ನಿಧನ



ದಾವಣಗೆರೆ ನಗರ ಎಸ್.ಕೆ.ಪಿ.ರಸ್ತೆ ನಿವಾಸಿ ದಿ.ಬೆಳ್ಳೂಡಿ ಮಲ್ಲೇಶಪ್ಪನವರ ಧರ್ಮಪತ್ನಿ ಶ್ರೀಮತಿ ಅನ್ನಪೂರ್ಣಮ್ಮ (88) ಇವರು ದಿನಾಂಕ 26.6.2023ರ ಸೋಮವಾರ ಬೆಳಿಗ್ಗೆ 11.30ಕ್ಕೆ ಲಿಂಗೈಕ್ಯರಾದರು. ಐವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.6.2023ರ ಸೋಮವಾರ ಸಂಜೆ 5ಕ್ಕೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿತು.

# ನ್ಯಾಮತಿಯ ರಸ್ತೆ ಬದಿಯ ಜಮೀನುಗಳಲ್ಲಿ ಮದ್ಯದ ಬಾಟಲ್ : ಕ್ರಮಕ್ಕೆ ಆಗ್ರಹ



ನ್ಯಾಮತಿ, ಜೂ. 26- ತಾಲ್ಲೂಕಿನ ಬಹುತೇಕ ಕೆರೆ, ಕಟ್ಟೆಗಳು, ರಸ್ತೆ ಬದಿಯ ಜಮೀನುಗಳಲ್ಲಿ ಮದ್ಯದ ಬಾಟಲ್‌ಗಳನ್ನು ಎಲ್ಲೆಂದರಲ್ಲಿ ಎಸೆಯು ವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೆರೆ- ಕಟ್ಟೆಗಳು ಗ್ರಾಮಗಳ ಜಲಪಾತ್ರೆಗಳು ಇದ್ದಂತೆ. ಅವುಗಳ ಒಡಲು ಸುತ್ತಮುತ್ತಲಿನ ವಾತಾವರಣ ಹದಗೆಡುತ್ತಿದ್ದು, ಕೆರೆಯ ಸುತ್ತಮುತ್ತಲಿನ ಪರಿಸರ ಮಲಿನಗೊಳ್ಳುತ್ತಿದೆ. ಸಂಜೆಯಾಗುತ್ತಲೇ ಕೆಲವರು ಕೆರೆ ಏರಿಯ ಮೇಲೆ ಮದ್ಯದ ಬಾಟಲಿ ಹಿಡಿದು ಮದ್ಯ ಸೇವಿಸಿ ಎಸೆದು ಹೋದ ಗಾಜಿನ ಬಾಟಲ್‌ಗಳ ಚೂರುಗಳು ಜನ, ಜಾನುವಾರಗಳ ಕಾಲಿಗೆ ಚುಚ್ಚಿ ಗಾಯಗೊಂಡಿರುವ ಘಟನೆಗಳೂ ನಡೆದಿವೆ.

ಇಂತಹ ಪ್ರಕರಣಗಳಿಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕಡಿವಾಣ ಹಾಕದಿದ್ದರೆ ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ಚಟುವಟಿಕೆಗಳು ಹೆಚ್ಚಾಗುವುದಲ್ಲದೆ ಸಮಾಜದಲ್ಲಿ ಸ್ವಾಸ್ಥ್ಯ ಹಾಳಾಗುತ್ತದೆ. ಇದನ್ನು ಕೂಡಲೇ ಅಧಿಕಾರಿಗಳು ಕಡಿವಾಣ ಹಾಕಲು ಮುಂದಾಗಬೇಕೆಂದು ಸಾರ್ವಜನಿಕರು, ರೈತರು, ಪರಿಸರ ಪ್ರೇಮಿಗಳು ಒತ್ತಾಯಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮಾದಕ ವಸ್ತು ಪೆಡ್ಲರ್‌ಗಳ ಜಾಲಕ್ಕೆ ಬೀಳದಿರಿ

## ಯುವ ಜನತೆಗೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ ಕಿವಿಮಾತು



ಹರಿಹರ, ಜೂ. 26- ಮಾನಸಿಕವಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಮಾದಕ ವಸ್ತುಗಳಿಂದ ವಿದ್ಯಾರ್ಥಿಗಳು ದೂರವಿರಬೇಕು ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ ಹೇಳಿದರು.

ದೊಡ್ಡಬಾತಿಯ ತಪೋವನ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಇಂದು ಆಯೋಜಿಸಿದ್ದ ಮಾದಕ ವಸ್ತು ವ್ಯಸನವನ್ನು ತಡೆಗಟ್ಟುವ ಕುರಿತ ಕಾರ್ಯಾಗಾರ ಮತ್ತು ಮಾದಕ ವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾದಕ ವಸ್ತು ವ್ಯಸನ ಎಂಬುದು ಕೇವಲ ರಾಜ್ಯ, ರಾಷ್ಟ್ರಕ್ಕೆ ಸೀಮಿತವಲ್ಲ. ವಿಶ್ವದ ಅನೇಕ ಪ್ರಬುದ್ಧ ರಾಷ್ಟ್ರಗಳೂ ಈ ಸಮಸ್ಯೆಯಿಂದ ನಲುಗುತ್ತಿವೆ. ಇದೊಂದು ಅಂತರರಾಷ್ಟ್ರೀಯ ಸಮಸ್ಯೆಯಾಗಿದ್ದು, ಅಫ್ಘಾನಿಸ್ತಾನ, ನೈಜೀರಿಯಾದಂತಹ ರಾಷ್ಟ್ರಗಳಿಂದ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ರವಾನೆ ಆಗುತ್ತವೆ. ದೇಶದಲ್ಲಿ ನೆಮ್ಮದಿ ಹಾಳು ಮಾಡಲು ಕೂಡ ಮಾದಕ ವಸ್ತುಗಳನ್ನು ಬಳಸುತ್ತಾರೆ. ಮಾದಕ ವಸ್ತು ಸರಬರಾಜು ಮಾಡಲು ಪೆಡ್ಲರ್‌ಗಳು ಹುಟ್ಟಿಕೊಂಡಿದ್ದಾರೆ. ಯುವ ಜನತೆ, ವಿದ್ಯಾರ್ಥಿಗಳು ಎಚ್ಚರ ವಹಿಸಬೇಕು, ಯಾವುದೇ ಕಾರಣಕ್ಕೂ ಈ ಜಾಲದ ಒಳಗೆ ಬೀಳಬಾರದು ಎಂದು ಹೇಳಿದರು.

ಮಾದಕ ವಸ್ತು ವ್ಯಸನಿಗಳಾದರೆ ಕೇವಲ ನಿಮಗಷ್ಟೇ ಹಾನಿ ಅಲ್ಲ ನಿಮ್ಮ ಆರೋಗ್ಯ, ಜೊತೆಗೆ ನಿಮ್ಮ ಕುಟುಂಬ, ನಿಮ್ಮ ಸುತ್ತಲಿನ ಪರಿಸರ, ಸಮಾಜಕ್ಕೆ ಹಾನಿ ಸಂಭವಿಸುತ್ತದೆ. ನಿಮ್ಮ ಸುತ್ತಲಿನ ಯಾರಾದರೂ ಇದರ ಚಟಕ್ಕೆ ಬಲಿಯಾಗಿದ್ದರೆ, ಮಾದಕ ವಸ್ತುಗಳ ಬಳಕೆ, ಮಾರಾಟ ಮಾಡುವುದು ಕಂಡು ಬಂದರೆ ಪೊಲೀಸರಿಗೆ ಮಾಹಿತಿ ನೀಡಿ ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಮಾದಕ ವ್ಯಸನ ಎಂಬುದು ಸಮಾಜದ ಮೇಲೆ ದೊಡ್ಡ ಪರಿಣಾಮ ಬೀರಿದೆ. ದೇಶದಲ್ಲಿ 2.5 ಕೋಟಿ ಜನ ಗಾಂಜಾ ಸೇವನೆಯಲ್ಲಿದ್ದಾರೆ ಎಂದು ಸರ್ವೆ ಹೇಳುತ್ತದೆ. ಇದನ್ನು ನಿರ್ಮೂಲನೆ ಮಾಡಲು ಎಲ್ಲರೂ ಸಹಕಾರ ನೀಡಬೇಕು ಎಂದು ಹೇಳಿದರು.

ಆಸ್ಪತ್ರೆಯಲ್ಲಿ 104 ಆರೋಗ್ಯ ಸಹಾಯವಾಣಿ ಸ್ಥಾಪಿಸಿದ್ದೇವೆ, 11416 ಟೆಲಿ ಮಾನಸ ವ್ಯವಸ್ಥೆಯಿದ್ದು ವ್ಯಸನಿಗಳು ಕರೆ ಮಾಡಿ ಸಹಾಯ ಪಡೆಯಬಹುದು ಎಂದು ತಿಳಿಸಿದರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್ ಮಾತನಾಡಿ, ಮಾದಕ ವ್ಯಸನಿಗಳಿಗೆ ದೈಹಿಕ ಅಂಗವಿಕಲ ಮಕ್ಕಳು ಹುಟ್ಟುತ್ತಾರೆ. ಚಿಕ್ಕಂದಿನಲ್ಲಿ ಒಳ್ಳೆಯವನಾಗಿದ್ದವನು ತನ್ನ ಪರಿಸರದ ಕಾರಣಕ್ಕೆ ಬೆಳೆಯುತ್ತಾ ಕೆಟ್ಟವನಾಗಬಹುದು. ತಮ್ಮ ಸುತ್ತಲಿನ ಪರಿಸರದ ಬಗ್ಗೆ ಎಚ್ಚರ ವಹಿಸಬೇಕು ಎಂದು ಹೇಳಿದರು.

ತಪೋವನ ಸಮೂಹ ಸಂಸ್ಥೆ ಚೇರ್ಮನ್ ಶಶಿಕುಮಾರ್ ಮೆಹರ್‌ವಾಡೆ ಮಾತನಾಡಿ, ತಪೋವನದ ಡಿ ಅಡಿಕ್ಷನ್ ಸೆಂಟರ್‌ನಲ್ಲಿ ಈವರೆಗೂ 12 ಸಾವಿರ ಮಂದಿ ಮಾದಕ ವ್ಯಸನಿಗಳು ಗುಣಮುಖರಾಗಿದ್ದಾರೆ. ಗಾಂಜಾ ಗಿಡಗಳನ್ನು ಎಮ್ಮೆ, ಹಸುಗಳಿಗೆ ಹಾಕಿದರೂ ತಿನ್ನುವುದಿಲ್ಲ. ದನಗಳು ತಿನ್ನದ್ದನ್ನು ಮನುಷ್ಯ ತಿನ್ನುವ ಪ್ರವೃತ್ತಿ ಸರಿಯಲ್ಲ.

ದಾವಣಗೆರೆಯಲ್ಲಿ ಗಾಂಜಾ ಸೇವನೆ ಹೆಚ್ಚಿತ್ತು, ಈಗ ಇದು ಕಡಿಮೆ ಆಗಿದೆ. ಮಾದಕ ವಸ್ತುಗಳ ಬೇಡಿಕೆಯನ್ನು ತಗ್ಗಿಸುವುದು ಕೂಡ ನಿಯಂತ್ರಣಕ್ಕೆ ಸಹಕಾರಿ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯಮಟ್ಟದ ಸಂಸ್ಥೆ ಅರಿವು ಮೂಡಿಸುವ ಕಾರ್ಯಕ್ರಮದ ಮೂಲಕ ಬೇಡಿಕೆ ತಗ್ಗಿಸುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಸದಾನಂದ ಹೆಗಡೆ ಮಾತನಾಡಿ, ಸಂಯಮ ಮತ್ತು ನಾಲಿಗೆ ರುಚಿಯ ನಿಯಂತ್ರಣದಿಂದ ಚಟಗಳಿಗೆ ಬಲಿಯಾಗುವುದನ್ನು ಹೇಗೆ ತಡೆಯಬಹುದು ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ.ಪಿ.ಎಂ. ಮಹಾಂತೇಶ್, ಡಾ.ಸುಮನಾ ಭಟ್, ಟಿ.ಆರ್. ಶೈಲಜಾ, ವೈದ್ಯಕೀಯ ನಿರ್ದೇಶಕ ಡಾ. ಶಿವರಾಜ್ ಪಾಟೀಲ್ ಇದ್ದರು.

ಉಪ ಪ್ರಾಚಾರ್ಯ ಡಾ. ಅಶ್ವಿನಿ ಸ್ವಾಗತಿಸಿದರು. ಡಾ. ಶೈಲಶ್ರೀ ನಿರೂಪಿಸಿದರು. ತಪೋವನ ವಿದ್ಯಾರ್ಥಿಗಳಾದ ಡಾ. ತನುಶ್ರೀ ತಂಡ ಮಾದಕ ವಸ್ತುಗಳ ಬಳಕೆಯಿಂದಾಗುವ ಅನಾಹುತ ಕುರಿತು ಕಿರುನಾಟಕ ಪ್ರದರ್ಶಿಸಿತು.

# ಟಿ. ಗಿರಿಜ ಸಾಹಿತ್ಯ ದತ್ತಿ ಪ್ರಶಸ್ತಿಗೆ ಸುಶೀಲಾದೇವಿ ಆರ್. ರಾವ್, ಚಂಪಾವತಿ ಶಿವಣ್ಣ ಆಯ್ಕೆ





ಬೆಂಗಳೂರು, ಜೂ. 26 - ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಲ್ಲಿ ಒಂದಾಗಿರುವ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರಕಟವಾಗಿದೆ. 2022ನೇಯ ಸಾಲಿನ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿಗೆ ನಾಡಿನ ಹಿರಿಯ ಲೇಖಕಿ, ದಾವಣಗೆರೆಯ ಶ್ರೀಮತಿ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಹಾಗೂ 2023ನೇಯ ಸಾಲಿನ ಪ್ರಶಸ್ತಿಗಾಗಿ ಮೈಸೂರಿನ ಶ್ರೀಮತಿ ಚಂಪಾವತಿ ಶಿವಣ್ಣ ಅವರು ಆಯ್ಕೆಯಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ತಿಳಿಸಿದ್ದಾರೆ.

ಶ್ರೀಮತಿ ಟಿ.ಎಸ್. ಶೈಲಜಾ ದಾವಣಗೆರೆ ಅವರು ನಾಡಿನ ಲೇಖಕಿಯರಿಗಾಗಿ ಕನ್ನಡಿಗರ ಸಾರ್ವಭೌಮ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಲಾಗಿರುವ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿಯು ಕನ್ನಡ ಸಾರಸ್ವತ ಲೋಕದಲ್ಲಿ ಗಣನೀಯ ಸಾಧನೆ ಮಾಡಿರುವ ಮಹಿಳಾ ಸಾಹಿತಿಯೊಬ್ಬರಿಗೆ ಪ್ರತಿ ವರ್ಷ ಪ್ರದಾನ ಮಾಡುವ ಆಶಯವನ್ನು ಹೊಂದಿರುತ್ತದೆ. ಪ್ರಸ್ತುತ ಪ್ರಶಸ್ತಿಯು 13,000 (ಹದಿಮೂರು ಸಾವಿರ) ರೂ. ನಗದು, ಸ್ಮರಣಿಕೆ, ಫಲ-ತಾಂಬೂಲಗಳನ್ನು ಒಳಗೊಂಡಿರುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ತಿಳಿಸಿದ್ದಾರೆ.

ಇದುವರೆಗೂ ನಾಡಿನ 8 ಜನ ಮಹಿಳಾ ಲೇಖಕಿಯರಿಗೆ ಪರಿಷತ್‌ನ ಪ್ರತಿಷ್ಠಿತ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಈ ಬಾರಿಯ ಆಯ್ಕೆ ಸಮಿತಿಯು 2023ನೇಯ ಸಾಲಿನ ಶ್ರೀಮತಿ ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿಗಾಗಿ ಶ್ರೀಮತಿ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಅವರನ್ನು ಆಯ್ಕೆ ಮಾಡಿದೆ. ಮೂಲತಃ ಚಿತ್ರದುರ್ಗ ಜಿಲ್ಲೆಯ ಗುಂಜಿಗನೂರಿನವರಾದ ಇವರು ಸದ್ಯ ದಾವಣಗೆರೆಯಲ್ಲಿ ನೆಲೆಸಿದ್ದಾರೆ. ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ, ನಾಟಕ ಮೊದಲಾದ ಸಾಹಿತ್ಯ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. 2023ನೇಯ ಸಾಲಿನ ಪ್ರಶಸ್ತಿಗಾಗಿ ಆಯ್ಕೆಯಾಗಿರುವ ಶ್ರೀಮತಿ ಚಂಪಾವತಿ ಶಿವಣ್ಣ ಅವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಜೋಗದವರಾದ ಇವರು ಸದ್ಯ ಮೈಸೂರಿನಲ್ಲಿ ನೆಲೆ ನಿಂತಿದ್ದಾರೆ. ಕಥಾ ಸಂಕಲನಗಳು, ಕವನ ಸಂಕಲನಗಳು, ಹನಿಗವನ ಸಂಕಲನಗಳು, ವಚನ ಸಂಕಲನ, ಹನಿಗವನ ಸಂಕಲನಗಳು, ವಚನ ಸಂಕಲನ, ಅಭಿನಂದನಾ ಗ್ರಂಥಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ದತ್ತಿದಾನಿಗಳ ಪರವಾಗಿ ಶ್ರೀಮತಿ ಅರುಂಧತಿ ರಮೇಶ್, ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಡಾ. ಪದ್ಮಿನಿ ನಾಗರಾಜು ಹಾಗೂ ಗೌರವ ಕೋಶಾಧ್ಯಕ್ಷ ಡಾ. ಬಿ.ಎಂ. ಪಟೇಲ್ ಪಾಂಡು ಅವರು ಉಪಸ್ಥಿತರಿದ್ದರು.

# ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ ಯೋಗ ದಿನಾಚರಣೆಯ ಸಂಭ್ರಮ



ದಾವಣಗೆರೆ, ಜೂ. 26- ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ 9ನೇ ವರ್ಷದ 'ಅಂತರರಾಷ್ಟ್ರೀಯ ಯೋಗ ದಿನಾಚರಣೆ' ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಯೋಗ ತರಬೇತುದಾರರಾದ ಕು. ಹರ್ಷಿತಾ ಎಂ.ಜಾಧವ್ ಮಾತನಾಡಿ, ಯೋಗವು ನಮ್ಮನ್ನು ವಿಷದಿಂದ ಮುಕ್ತಗೊಳಿಸುವ ಮೂಲಕ ರೋಗ ನಿರೋಧಕ ಶಕ್ತಿಯನ್ನು ಸುಧಾರಿಸುತ್ತದೆ. ಅಲ್ಲದೆ ನಮ್ಮ ಆತ್ಮ, ದೇಹದ ಸೌಂದರ್ಯವನ್ನು ಕಾಪಾಡುತ್ತದೆ. ಇಂದಿನ ಒತ್ತಡದ ಜೀವನಕ್ಕೆ ಯೋಗ ಒಂದೇ ಮದ್ದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಸಿ.ಜಿ. ದಿನೇಶ್ ವಹಿಸಿಕೊಂಡಿದ್ದರು. ಸಂಸ್ಥೆಯ ಜಂಟಿ ಕಾರ್ಯದರ್ಶಿ ಭೈರೇಶ್, ಕಾಲೇಜಿನ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್ ಚಿದಾನಂದ್, ಶಾಲೆಯ ಪ್ರಾಂಶುಪಾಲ ಕೊಟ್ರೇಶ್ ಯು. ಹಾಗೂ ಇತರರು ಭಾಗವಹಿಸಿದ್ದರು.

# ನಾಡಿದ್ದು ಬಕ್ರೀದ್ ಹಬ್ಬ ಮಲೇಬೆನ್ನೂರಿನಲ್ಲಿ ಶಾಂತಿ ಸಭೆ

ಮಲೇಬೆನ್ನೂರು, ಜೂ.26- ಯಾವುದೇ ಧಾರ್ಮಿಕ ಹಬ್ಬಗಳಾಗಲೀ ನಾವು ಸಾರ್ವಜನಿಕರ ರಕ್ಷಣೆಗೆ ಸದಾ ಸಿದ್ಧರಿದ್ದೇವೆ. ಹಬ್ಬಗಳನ್ನು ಸಡಗರ, ಸಂಭ್ರಮ, ಸಂತೋಷದ ಜೊತೆಗೆ ಸಾಮರಸ್ಯದಿಂದ ಆಚರಿಸುವಂತಾಗಬೇಕು ಎಂದು ಹರಿಹರ ವೃತ್ತ ನಿರೀಕ್ಷಕ ಸತೀಶ್ ತಿಳಿಸಿದರು.

ಇದೇ ದಿನಾಂಕ 29ರ ಶುಕ್ರವಾರ ಜರುಗಲಿರುವ ಬಕ್ರೀದ್ ಹಬ್ಬದ ಆಚರಣೆ ಪ್ರಯುಕ್ತ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೊಲೀಸ್ ನೈತಿಕಗಿರಿಗೆ ಅವಕಾಶವಿರುವುದಿಲ್ಲ. ನಂದಿಗುಡಿ ಬಳಿ ಚೆಕ್‌ಪೋಸ್ಟ್ ಹಾಕಲಾಗುವುದು ಮತ್ತು ಸಿಬ್ಬಂದಿಗಳು ವಿಶೇಷವಾಗಿ ಗಸ್ತು ಹಾಕುತ್ತಿರುತ್ತಾರೆ. ಆದ್ದರಿಂದ ಸಾರ್ವಜನಿಕರು ಯಾವುದೇ ಗಾಳಿಮಾತಿಗೆ ಕಿವಿಕೊಡದೇ ಇಲಾಖೆಯ 112 ನಂಬರಿಗೆ ಅಥವಾ ಹತ್ತಿರದ ಠಾಣೆಗೆ ಮಾಹಿತಿ ನೀಡುವಂತೆ ತಿಳಿಸಿದರು.

ಪುರಸಭೆ ಸದಸ್ಯರಾದ ನಯಾಜ್, ಭೋವಿ ಶಿವು, ಹನುಮಂತಪ್ಪ ಮಾತನಾಡಿ, ಪಟ್ಟಣಕ್ಕೆ ಲಕ್ಷಾಂತರ ರೂ.ಗಳ ವೆಚ್ಚದಲ್ಲಿ ಸಿಸಿ ಕ್ಯಾಮರಾ ಹಾಕಿಸಲಾಗಿದೆ. ಆದರೆ, ಅವುಗಳಲ್ಲಿ ಕೆಲವು ಕಾರ್ಯನಿರ್ವಹಿಸುತ್ತಿಲ್ಲ. ಅಂತಹ ಕ್ಯಾಮರಾಗಳನ್ನು ಶೀಘ್ರವಾಗಿ ಸರಿಪಡಿಸಿಕೊಂಡಲ್ಲಿ ಪಟ್ಟಣದ ಶಾಂತಿ, ಸುವ್ಯವಸ್ಥೆಗೆ ಅನುಕೂಲವಾಗಲಿದೆ ಎಂದರು.

ಪುರಸಭೆ ಸದಸ್ಯ ಶಬ್ಬೀರ್ ಖಾನ್, ಮುತುವಲ್ಲಿಗಳಾದ ಸೈಯದ್ ಅಕ್ರಂ, ಅಮ್ಜದ್ ಅಲಿ, ಮುಖಂಡರಾದ ಸೈಯದ್ ಸಾಬೀರ್ ಅಲಿ, ರೋಷನ್, ಜಯಣ್ಣ, ಎಳೆಹೊಳೆ ಕುಮಾರ್ ಮತ್ತು ಸಾರ್ವಜನಿಕರು ಸಭೆಯಲ್ಲಿ ಇದ್ದರು.

ಪಿಎಸ್‌ಐ ಪ್ರಭು ಕೆಳಗಿನಮನೆ ಸ್ವಾಗತಿಸಿದರು. ಎಎಸ್‌ಐ ಶ್ರೀನಿವಾಸ್ ವಂದಿಸಿದರು.



# ದಿದ್ದಿಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ರೇಖಾ ರಾಜ್‌ಕುಮಾರ್



ಜಗಳೂರು, ಜೂ26- ತಾಲ್ಲೂಕಿನ ದಿದ್ದಿಗಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ರೇಖಾ ರಾಜ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ತೆರವಾದ ಸಾಮಾನ್ಯ ಮೀಸಲು ಕ್ಷೇತ್ರದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೆಂಚಮ್ಮನಾಗ್ತಿಹಳ್ಳಿ ಗ್ರಾಮದ ರೇಖಾ ರಾಜ್‌ಕುಮಾರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಲೋಕೋಪಯೋಗಿ ಎಇಇ ರಾಮಚಂದ್ರಪ್ಪ ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯರಾದ ವೀರಭದ್ರಯ್ಯ, ಜಯಶೀಲಾ ಪ್ರಕಾಶ್, ಪ್ರಶಾಂತ್, ನಾಗಪ್ಪ, ರಾಧಮ್ಮ ಪವಿತ್ರ ಆನಂದ್, ಮಹೇಶಪ್ಪ, ಬಾಲರಾಜ್, ವೆಂಕಟೇಶ್, ಗುತ್ತೆಮ್ಮ, ಸಾವಿತ್ರ ಶೇಖರ್, ಮುಕುಂದಪ್ಪ, ಮಾರಮ್ಮ, ಹೇಮಕ್ಕ ರಾಮಣ್ಣ, ಸೌಭಾಗ್ಯಮ್ಮ, ನೀಲಮ್ಮ, ರೇಣುಕಮ್ಮ ಪ್ರಕಾಶ್, ಮುಖಂಡರಾದ ಬಸವರಾಜ್ ದಿದ್ದಿಗೆ, ಟಿ.ಪಿ.ನಾಗರಾಜ್, ಆನಂದ್ ಇದ್ದರು.

# ಶಾಂತಿ ನಗರದಲ್ಲಿ ಉಚಿತ ಆರೋಗ್ಯ ಶಿಬಿರ



ದಾವಣಗೆರೆ, ಜೂ.26- ಸ್ಥಳೀಯ ಶಾಂತಿ ನಗರ 3ನೇ ಕ್ರಾಸ್, ರಿಂಗ್ ರೋಡ್ ಮೇನ್, ಯಲ್ಲಮ್ಮ ನಗರದ ಹತ್ತಿರದಲ್ಲಿ ಹಸಿರು ದಳ ಹಾಗು ಜಿಲ್ಲಾ ಅಲೆಮಾರಿ ಗೋಸಾಯಿ ಸಮುದಾಯ ಒಕ್ಕೂಟದ ಆಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಸರ್ಕಾರಿ ಜಿಲ್ಲಾ ಆಸ್ಪತ್ರೆಯ ವೈದ್ಯರುಗಳು, ನರ್ಸ್‌ಗಳು ಉಚಿತವಾಗಿ ಸೇವೆ ಸಲ್ಲಿಸಿದರು. ಗಣ್ಯ ನಾಗರಿಕರಾದ ಸೋಮನಾಥ ಪಡಿಯಾರ್, ಶಿವಕುಮಾರ್ ಗೋಸಾವಿ, ಎಂ.ಜಿ. ಗೋಸಾವಿ, ಭರತ್ ಗೋಸಾವಿ, ಶ್ರೀನಿವಾಸ್ ಗೋಸಾವಿ, ಶಿವರಾಜ್ ಗೋಸಾವಿ ಮತ್ತಿತರರು ಉಚಿತ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿದ್ದರು.

# ಪಂಚಮಸಾಲಿ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ.26- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕದ ವತಿಯಿಂದ 2023ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಂದ 'ಸ್ವಾಭಿಮಾನ ಪ್ರತಿಭಾ ಪುರಸ್ಕಾರ'ಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು ಸಮಾಜದ ಕಛೇರಿ ನಂ. 477, 1ನೇ ಮಹಡಿ, 5ನೇ ಮುಖ್ಯ ರಸ್ತೆ, 7ನೇ ಕ್ರಾಸ್, ಚೇತನಾ ಹೋಟೆಲ್ ರಸ್ತೆ, ಪಿ.ಜೆ.ಬಡಾವಣೆ ಅಥವಾ ಸಮಾಜದ ಅಂತರ್ಜಾಲ ವೆಬ್‌ಸೈಟ್ www.panchamasali.org ನಲ್ಲಿ ಅರ್ಜಿಯನ್ನು ಪಡೆದು, ದಿನಾಂಕ 01-07-2023 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ (08192) 222008 ಸಂಪರ್ಕಿಸಬಹುದು.

# ಬದುಕುವ ಸಮಾನ ಹಕ್ಕಿದೆ

(1ನೇ ಪುಟದಿಂದ) ಲಾಂಛನದಲ್ಲೂ ನಾಲ್ಕು ಮುಖದ ಸಿಂಹ ಇದೆ. ನಮ್ಮ ರಾಜ್ಯದ ಲಾಂಛನದಲ್ಲೂ ಸಿಂಹ ಇದೆ ಜೊತೆಗೆ ಸಿಂಹದ ದೇಹ ಮತ್ತು ಸೊಂಡಿಲಿರುವ ಕಾಲ್ಪನಿಕ ಮೃಗವೂ ಇದೆ. ಹಸಿರೂ ಇದೆ ಮಿಗಿಲಾಗಿ ಗಂಡಬೇರುಂಡ ಪಕ್ಷಿ ಇದೆ.

ವಿಧಾನಸೌಧದ ಗೋಪುರದಲ್ಲೂ ಸಿಂಹ ಲಾಂಛನವಿದೆ. ಅಂದರೆ ವನ್ಯಮೃಗಗಳು ನಮ್ಮ ಆಡಳಿತದಲ್ಲಿ ಹಾಸು ಹೊಕ್ಕಾಗಿವೆ ಎಂದರೆ ತಪ್ಪಾಗಲಾರದು ಎಂದರು.

ಕರ್ನಾಟಕ ನಕ್ಷೆಯ ಆಕಾರದಲ್ಲಿರುವ ಲಾಂಛನದಲ್ಲಿ ರಾಷ್ಟ್ರೀಯ ಪ್ರಾಣಿ ಹುಲಿ, ರಾಜ್ಯಪಕ್ಷಿ ನೀಲಕಂಠ, ರಾಜ್ಯ ಪ್ರಾಣಿ ಆನೆ, ರಾಜ್ಯದ ಹಿರಿಮೆ ಮತ್ತು ಗರಿಮೆಯಾದ ಶ್ರೀಗಂಧ, ರಾಜ್ಯ ಚಿಟ್ಟೆ ಸೌಥೆರ್ನ್ ಬರ್ಡ್ ವಿಂಗ್ ಮತ್ತು ಇವೆಲ್ಲಕ್ಕೂ ಮೂಲಾಧಾರವಾದ ಜಲಸಂಪನ್ಮೂಲವಿದ್ದು ಇಲಾಖೆಯನ್ನು ಸೂಕ್ತವಾಗಿ ಪ್ರತಿನಿಧಿಸುತ್ತದೆ ಎಂದರು.

# ಮಹಾಲಿಂಗರಂಗ ಪ್ರಶಸ್ತಿ ದಾನಿಗಳನ್ನು ಭೇಟಿ ಮಾಡಿದ ಜಿಲ್ಲಾ ಕಸಾಪ ಅಧ್ಯಕ್ಷರು



ದಾವಣಗೆರೆ, ಜೂ. 26- ಶ್ರೀಮತಿ ಗೌರಮ್ಮ ಮೋತಿ ಪಿ. ರಾಮರಾವ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರ ಜಿಲ್ಲೆಯ ಶ್ರೇಷ್ಠ ಸಾಹಿತಿಗಳಿಗೆ ಕೊಡುವ 'ಮಹಾಲಿಂಗರಂಗ' ಪ್ರಶಸ್ತಿಯನ್ನು 2022 ಹಾಗೂ 2023 ರ ಸಾಲಿಗೆ ನೀಡುವ ಕುರಿತಾಗಿ ಟ್ರಸ್ಟ್ ಮುಖ್ಯಸ್ಥ ಮೋತಿ ಪರಮೇಶ್ವರ ರಾವ್ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಅವರು ಭೇಟಿ ಮಾಡಿ ಮಹಾಲಿಂಗರಂಗ ಪ್ರಶಸ್ತಿಯ ಆಯ್ಕೆ ಸಮಿತಿ ಸಭೆಯ ವಿವರ ನೀಡಿದರು.

ಮೋತಿ ಪರಮೇಶ್ವರ ರಾವ್ ಅವರು ಆಯ್ಕೆ ಸಮಿತಿಯ ತೀರ್ಮಾನಕ್ಕೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಕೀರ್ತಿಶೇಷ ಮೋತಿ ರಾಮರಾವ್ ಕಾಲದಿಂದಲೂ ನಡೆಸಿಕೊಂಡು ಬರುತ್ತಿರುವ ಮಹಾಲಿಂಗರಂಗ ಪ್ರಶಸ್ತಿಯನ್ನು ಮುಂದುವರೆಸಿಕೊಂಡು ಬರುತ್ತಿರುವುದು ಸಾಹಿತ್ಯ ಲೋಕಕ್ಕೆ ಕೊಡುವ ಗೌರವವೆಂದು ಪ್ರಶಂಸೆ ವ್ಯಕ್ತಪಡಿಸಿದ ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ, ಈ ಪ್ರೋತ್ಸಾಹಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಾಹಿತ್ಯ ಬಳಗ ಮತ್ತು ಎಲ್ಲ ಕನ್ನಡದ ಮನಸ್ಸುಗಳ ಪರವಾಗಿ ಟ್ರಸ್ಟಿನ ಅಧ್ಯಕ್ಷರನ್ನು ಮತ್ತು ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಉಪಸ್ಥಿತರಿದ್ದರು.

# ಅಧಿಕಾರ ಮದದ ರಾಜಕಾರಣ ಬೇಡ

(1ನೇ ಪುಟದಿಂದ) ತಿಳಿ ಹೇಳಿದರು. ವಾಟಾಳ್ ನಾಗರಾಜ್ ಅವರು ಒಬ್ಬ ಮಾದರಿ ಶಾಸಕರಾಗಿದ್ದರು. ಅಧಿವೇಶನದ ಬೆಲ್ ಆಗುತ್ತಿದ್ದಂತೆ ಸದನದ ಒಳಗೆ ಬಂದು ಕೂರುತ್ತಿದ್ದರು. ಅಧಿವೇಶನ ಮುಗಿಯುವವರೆಗೂ ಅಲುಗಾಡದೆ ಕೂರುತ್ತಿದ್ದರು. ಇದನ್ನು ಪ್ರತಿಯೊಬ್ಬರೂ ಪಾಲಿಸಿ ಎಂದು ಸೂಚಿಸಿದರು.

# ನಕಲಿ ಕಲ್ಲಿದ್ದಲು ಪರೀಕ್ಷೆ; ಸಿ.ಬಿ.ಐ.ನಿಂದ ಪ್ರಕರಣ ದಾಖಲು

ನವದೆಹಲಿ, ಜೂ. 26 – ಸಿ.ಎಸ್.ಐ.ಆರ್. - ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೈನಿಂಗ್ ಮಾಜಿ ನಿರ್ದೇಶಕ ಪಿ.ಕೆ. ಸಿಂಗ್ ಹಾಗೂ ಅದರ ಮುಖ್ಯ ವಿಜ್ಞಾನಿ ಎ.ಕೆ. ಸಿಂಗ್ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ. ಕಲ್ಲಿದ್ದಲು ಪರೀಕ್ಷೆ ಯೋಜನೆಗಳಲ್ಲಿ 137 ಕೋಟಿ ರೂ.ಗಳ ಹಗರಣ ನಡೆಸಿದ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕಲ್ಲಿದ್ದಲು ಪರೀಕ್ಷೆ ನಡೆಸುವ ಹೆಸರಿನಲ್ಲಿ ಗ್ರಂಥಪಾಲಕರು, ಎಂ.ಬಿ.ಬಿ.ಎಸ್. ವೈದ್ಯರು ಹಾಗೂ ತಾಂತ್ರಿಕ ಅಧಿಕಾರಿಗಳೂ ಸೇರಿದಂತೆ ಹಲವು ಅನರ್ಹರಿಗೆ ಹಣ ಪಾವತಿಸಲಾಗಿತ್ತು ಎಂದು ಸಿ.ಬಿ.ಐ. ಆರೋಪಿಸಿದೆ.

304 ಪರೀಕ್ಷೆಗಳನ್ನು ನಡೆಸಿದ ಹೆಸರಿನಲ್ಲಿ ಪಿ.ಕೆ. ಸಿಂಗ್ 15.36 ಕೋಟಿ ರೂ. ಹಾಗೂ ಎ.ಕೆ. ಸಿಂಗ್ 9.04 ಕೋಟಿ ರೂ. ಪಡೆದಿದ್ದಾಗಿ ಸಿ.ಬಿ.ಐ. ಆರೋಪಿಸಿದೆ.

ವಿದ್ಯುತ್ ಕಂಪನಿಗಳು ಬಳಸುವ ಕಲ್ಲಿದ್ದಲಿನ ಪರೀಕ್ಷೆಗಾಗಿ ಸಿ.ಎಸ್.ಐ.ಆರ್. - ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೈನಿಂಗ್ ಅನ್ನು ಮೂರನೇ ಪಾರ್ಟಿಯಾಗಿ ಬಳಸಿಕೊಳ್ಳಲಾಗಿತ್ತು. ಈ ವೇಳೆ ಉಭಯರು ವಂಚನೆ ಮಾಡಿದ್ದಾರೆ.

# ಬಿಜೆಪಿಯಲ್ಲಿ ಅಶಿಸ್ತು ಹೆಚ್ಚಳ

(1ನೇ ಪುಟದಿಂದ) ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನಮ್ಮ ಹೈಕಮಾಂಡ್ ದುರ್ಬಲ ಇಲ್ಲ. ಒಂಚೂರು ಆಟವಾಡಲಿ ಅಂತ ಬಿಟ್ಟಿದ್ದಾರೆ. ಯಾವಾಗ ಬಾಲ ಕಟ್ ಮಾಡಬೇಕೋ ಆಗ ಕಟ್ ಮಾಡ್ತಾರೆ ಎಂದೂ ಅವರು ಹೇಳಿದರು.

# ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸದಿದ್ದರೆ ಸೂಕ್ತ ಕ್ರಮ

## ಕಂದಾಯ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಡಿ.ಜಿ.ಶಾಂತನಗೌಡ ಎಚ್ಚರಿಕೆ



ನ್ಯಾಮತಿ, ಜೂ.26- ಹಿಂದಿನ ಸರ್ಕಾರದ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು, ನನ್ನ ಅವಧಿಯಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಬೇಕು ಇಲ್ಲದಿದ್ದರೆ, ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಶಾಸಕ ಡಿ.ಜಿ.ಶಾಂತನಗೌಡ ಎಚ್ಚರಿಕೆ ನೀಡಿದರು.

ತಾಲ್ಲೂಕಿನ ತೀರ್ಥರಾಮೇಶ್ವರದ ಯುವ ಜನ ವಸತಿ ನಿಲಯದಲ್ಲಿ ಅವಳಿ ತಾಲ್ಲೂಕಿನ ಕಂದಾಯ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಹಿಂದಿನ ಅವಧಿಯಲ್ಲಿ ಕಂಡೂ ಕೇಳರಿಯದ ಭ್ರಷ್ಟಾಚಾರ, ಸ್ವಜನ-ಪಕ್ಷ ಪಾತ, ದುರಾಡಳಿತ, ರೈತರ ಬಗ್ಗೆ ನಿರಾಸಕ್ತಿ, ಕಾನೂನು ಪ್ರಕಾರ ದಾಖಲೆಗಳು ಸರಿಯಿದ್ದರೂ ವಿನಾಕಾರಣ ಕೆಲಸ ಮಾಡಿಕೊಡಲು ವಿಳಂಬ ಮಾಡಿರುವುದು ಗಮನಕ್ಕೆ ಬಂದಿದೆ. ಇವು ನಮ್ಮ ಸರ್ಕಾರದ ಅವಧಿಯಲ್ಲಿ ಮರುಕಳಿಸಬಾರದು ಎಂದು ಸೂಚನೆ ನೀಡಿದರು.

ನಾನು ಸೂಚನೆ ನೀಡಿದ ಮೇಲೂ ಯಾವುದೇ ಅಧಿಕಾರಿಗಳು ತಪ್ಪು ಮಾಡಿದ್ದು ಕಂಡು ಬಂದರೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ. ಹಾಗಾಗಿ ಅಧಿಕಾರಿಗಳು ಜಾಗೃತೆಯಿಂದ ಕೆಲಸ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಹೆಣ್ಣು ಮಕ್ಕಳು ತವರು ಮನೆಗೆ ಹೋಗುವಂತೆ ರೈತರು ತಮ್ಮ ಕೆಲಸವಿದ್ದಾಗ ಮಾತ್ರವೇ ಕಂದಾಯ ಇಲಾಖೆಗೆ ಬರುತ್ತಾರೆ. ಇನ್ನು ಮುಂದೆ ಅಧಿಕಾರಿಗಳು ರೈತರಿಗೆ ಸಮಯಕ್ಕೆ ಸರಿಯಾಗಿ ಅವರ ಕೆಲಸ ಮಾಡಿಕೊಡಬೇಕು. ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಕಾರ್ಯ ನಿರ್ವಹಿಸಲೇಬೇಕು. ಮಳೆ ಹಾನಿ ಮತ್ತು ಬೆಳೆ ಹಾನಿಗೆ ಸಂಬಂಧಿಸಿದ ಅರ್ಜಿಗಳನ್ನೂ ವಿನಾಕಾರಣ ಪೆಂಡಿಂಗ್ ಇಡದೇ, ಭ್ರಷ್ಟಾಚಾರಕ್ಕೆ ಆಸ್ಪದ ಕೊಡದೇ ಸಮಯಕ್ಕೆ ಸರಿಯಾಗಿ ಅರ್ಜಿಗಳನ್ನು ವಿಲೇ ಮಾಡುವಂತೆ ಸೂಚಿಸಿದರು.

ಸರ್ವೇ ಇಲಾಖೆಯವರ ಮೇಲೂ ಸಾಕಷ್ಟು ವಿಳಂಬ ಧೋರಣೆಯ ದೂರುಗಳು ಕೇಳಿಬಂದಿದ್ದು ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಕೆಲಸ ನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು.

ಆದಷ್ಟು ಬೇಗ ಬಗರ್ ಹುಕ್ಕುಂ ಸಮಿತಿ ರಚನೆ ಮಾಡಿ ಅರ್ಹರಿಗೆ ನ್ಯಾಯ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಅವಳಿ ತಾಲ್ಲೂಕಿನ ಅಧಿಕಾರಿಗಳ ಸಭೆಯಲ್ಲಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಭೂ-ಮಾಪನ ಇಲಾಖೆಯ ಅಧಿಕಾರಿ ಸುರೇಶ್, ಹೊನ್ನಾಳಿ ತಹಶೀಲ್ದಾರ್ ತಿರುಪತಿ ಪಾಟೀಲ್, ಗ್ರೇಡ್-2 ತಹಶೀಲ್ದಾರ್ ಸುರೇಶ್‌ನಾಯ್ಕ್, ಉಪ-ತಹಶೀಲ್ದಾರ್‌ಗಳಾದ ಎ.ಕೆ.ಚಂದ್ರಪ್ಪ, ಮಂಜುನಾಥ್ ಇಂಗಳಗೊಂದಿ, ರಾಜಸ್ವ ನಿರೀಕ್ಷಕರಾದ ದಿನೇಶ್ ಬಾಬು, ಗುರುಪ್ರಸಾದ್, ಜಯಪ್ರಕಾಶ್, ನ್ಯಾಮತಿ ತಹಶೀಲ್ದಾರ್ ಆರ್.ವಿ.ಕಟ್ಟಿ, ಗ್ರೇಡ್-2 ತಹಶೀಲ್ದಾರ್ ಎ.ಸಿ.ನಂದ್ಯಪ್ಪ, ಆರ್.ಆರ್.ಶಿರಸ್ತೇದಾರ್ ಕೆಂಚಮ್ಮ, ಚುನಾವಣಾ ಶಿರಸ್ತೇದಾರ್ ಚಂದ್ರಶೇಖರ್, ರಾಜಸ್ವ ನಿರೀಕ್ಷಕರಾದ ಸಂತೋಷ್, ಸುಧೀರ್, ಎಫ್.ಡಿ.ಎ.ಧನುಷ್ ಮತ್ತಿತರರು ಇದ್ದರು.

# ಐಎಂಎ ಮಹಿಳಾ ವಿಭಾಗದಿಂದ 'ನಿತ್ಯ ಜೀವನದಲ್ಲಿ ಸಂಗೀತ' ಉಪನ್ಯಾಸ




ದಾವಣಗೆರೆ, ಜೂ. 26- ನಗರದ ಐಎಂಎ ಮಹಿಳಾ ವಿಭಾಗದಿಂದ ಈಚೆಗೆ ಐಎಂಎ ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ವಿತರಣೆ ಮತ್ತು ವಿಶ್ವ ಸಂಗೀತ ದಿನಾಚರಣೆಯ ಪೂರ್ವಭಾವಿಯಾಗಿ ನಿತ್ಯ ಜೀವನದಲ್ಲಿ ಸಂಗೀತ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನಿತ್ಯ ಜೀವನದಲ್ಲಿ ಸಂಗೀತ ಕಲಿಕೆ ವಿಷಯ ಕುರಿತು ನಗರದ ಮಹತಿ ಸಂಗೀತ ವಿದ್ಯಾಲಯದ ವಿದ್ವಾನ್ ಎಂ. ದ್ವಾರಕೀಶ್ ಮಾತನಾಡುತ್ತಾ, ಸಂಗೀತ ಕಲಿಕೆಯನ್ನು ಮಾಡುವುದರಿಂದ ಮನುಷ್ಯನ ಮಾನಸಿಕ ಮತ್ತು ಬೌದ್ಧಿಕ ವಿಕಾಸ ಹೆಚ್ಚಾಗುವುದು. ಸಂಗೀತ ಕಲಿಕೆಯಿಂದ ದೊರಕುವ ಜೀವನ ಮೌಲ್ಯಗಳು, ಸಂಗೀತ ಶಿಕ್ಷಣ ಪದ್ಧತಿ, ಸಂಗೀತದ ಕಲಿಕೆಯ ಮೂಲಕ ಭೌತಶಾಸ್ತ್ರ, ಗಣಿತ ಶಾಸ್ತ್ರ, ವ್ಯಾಕರಣ, ಶಿಲ್ಪ ಶಾಸ್ತ್ರದಲ್ಲಿ ಸಂಗೀತ ವೈಶಿಷ್ಟ್ಯ, ಸಂಗೀತ ಕಲಿಕೆಗೆ ಅವಶ್ಯಕ ಗುಣಗಳು, ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಿಸಿಕೊಳ್ಳುವುದು ಮುಂತಾದ ವಿಷಯಗಳನ್ನು ತಿಳಿಸಿಕೊಟ್ಟರು.

ಶ್ರೀಮತಿ ತುಳಸೀ ಮಹೇಶ್ವರಪ್ಪ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಸುಲೋಚನಾ ಉಮಾಕಾಂತ್ ಸುಭಾಷಿತ ವಾಚನ ಮಾಡಿದರು. ಶ್ರೀಮತಿ ಸವಿತಾ ಕೂಲಂಬಿ ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಗೀತಾ ರಾಜು ಬಹುಮಾನ ವಿತರಣೆ ಮಾಡಿದರು. ಶ್ರೀಮತಿ ಶಿವಪ್ರಭಾ ದೊಡ್ಡಿಕೊಪ್ಪ ವಂದಿಸಿದರು.

# ಎಪಿಎಂಸಿ ತಿದ್ದುಪಡಿ ಕಾಯ್ದೆ ಹಿಂಪಡೆ ನಿರ್ಧಾರಕ್ಕೆ ಆಕ್ಷೇಪ

ದಾವಣಗೆರೆ, ಜೂ. 26- ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಏಕಾಏಕಿ ಹಿಂಪಡೆದಿರುವುದು ಮುಂದಿನ ದಿನಗಳಲ್ಲಿ ರೈತರಿಗೆ ಮರಣ ಶಾಸನವಾಗಲಿದೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ. ಸತೀಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡುವಾಗ, ಎಪಿಎಂಸಿಗಳಿಂದ ಮಾರುಕಟ್ಟೆ ಶುಲ್ಕದ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ಬರುತ್ತಿದ್ದ ಆದಾಯ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಎಪಿಎಂಸಿ ಪ್ರಾಂಗಣಕ್ಕೆ ಬರುವ ರೈತರ ಸಂಖ್ಯೆ ಕಡಿಮೆಯಾಗಿದ್ದು, ಇದರಿಂದ ವರ್ತಕರ ಮತ್ತು ಹಮಾಲರ ಲಕ್ಷಾಂತರ ಕುಟುಂಬಗಳು ಬೀದಿಗೆ ಬಿದ್ದಿವೆ. ಆದ್ದರಿಂದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುತ್ತಿದ್ದೇವೆ ಎಂದು ಹೇಳಿರುವುದು ಎಷ್ಟರಮಟ್ಟಿಗೆ ಸರಿ ಎಂದು ಸತೀಶ್ ಪ್ರಶ್ನಿಸಿದರು. ಇವರ ಹೇಳಿಕೆಯನ್ನು ಗಂಭೀರವಾಗಿ ಗಮನಿಸಿದಾಗ ರೈತರ ಹಿತಾಸಕ್ತಿಗಿಂತ ಎಪಿಎಂಸಿ ಯಿಂದ ಬರುವ ಆದಾಯ ಮತ್ತು ವರ್ತಕರ, ಹಮಾಲರ ಹಿತಾಸಕ್ತಿ ಮುಖ್ಯವಾಗಿದೆ ಎಂದು ತಿಳಿದು ಬರುತ್ತದೆ. ಎಪಿಎಂಸಿ ಪ್ರಾಂಗಣದಲ್ಲಿ ಮಾರಾಟ ಮಾಡಲು ಬರುವ ರೈತರಿಗೆ ಆಗುತ್ತಿದ್ದ ಅನ್ಯಾಯ, ಅಕ್ರಮ, ಶೋಷಣೆ ತಪ್ಪಿಸುವ ಉದ್ದೇಶದಿಂದ ರೈತರು ಎಲ್ಲಿಬೇಕಾದರೂ, ಯಾರಿಗೆ ಬೇಕಾದರೂ ಮಾರಾಟ ಮಾಡುವ ಅವಕಾಶ ಕಲ್ಪಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಇದರಿಂದ ರೈತರು ಬೆಳೆದ ಉತ್ಪನ್ನಗಳನ್ನು ಜಮೀನಿನಲ್ಲಿ ಅಥವಾ ತಮ್ಮ ಮನೆ ಅಂಗಳದಲ್ಲಿ ದಾಸ್ತಾನು ಮಾಡಿ , ಮಾರಾಟ ಮಾಡುತ್ತಿದ್ದರು. ರೈತರು ತಮ್ಮ ಜಮೀನು ಬಳಿ ಅಥವಾ ತಮ್ಮ ಮನೆ ಅಂಗಳದಲ್ಲಿ ದಾಸ್ತಾನು ಮಾಡಿದ ರಾಶಿ ಧಾನ್ಯಕ್ಕೆ ಉತ್ತಮ ಬೆಲೆ ಸಿಗದಿದ್ದರೆ ಮಾರಾಟ ಮಾಡಲು ನಿರಾಕರಿಸಿ, ಸ್ವಲ್ಪ ದಿನಗಳವರೆಗೆ ಕಾಯುತ್ತಾರೆ ಎಂದು ಹೇಳಿದರು.

ಎಪಿಎಂಸಿಗೆ ತಂದರೆ ಚೀಲಕ್ಕೆ ತುಂಬಿ ವಾಹನ ಸಾಗಾಟ, ಹಮಾಲಿ ಖರ್ಚು ರೈತನಿಗೆ ತಗಲುತ್ತದೆ. ಅಂದು ಎಪಿಎಂಸಿಯಲ್ಲಿ ಉತ್ತಮ ಬೆಲೆ ಸಿಗದಿದ್ದರೆ ಅಲ್ಲಿ ದಾಸ್ತಾನು ಮಾಡುವ ಅನುಕೂಲತೆ ಇರುವುದಿಲ್ಲ. ಸುರಕ್ಷತೆ ಖಾತ್ರಿ ಇರುವುದಿಲ್ಲ. ಲೋಡ್ ಮಾಡಿಕೊಂಡು ಹಿಂತಿರುಗಿ ತೆಗೆದುಕೊಂಡು ಹೋಗಲು ಆಗದೇ, ದಲಾಲರು, ಖರೀದಿದಾರರು ನಿರ್ಧರಿಸಿದ ಬೆಲೆಗೆ ಮಾರಾಟ ಮಾಡಿ ಹೋಗುವ ಅಸಹಾಯಕ ಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ದಾವಣಗೆರೆ ತಾಲ್ಲೂಕಿನಲ್ಲಿ ಪ್ರಸ್ತುತ ಹಂಗಾಮಿನಲ್ಲಿ ಸುಮಾರು 19 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. 109250 ಮೆಟ್ರಿಕ್ ಟನ್ ಭತ್ತದ ಉತ್ಪಾದನೆಯಾಗಿದೆ. ಇದರಲ್ಲಿ ಕೇವಲ 8803 ಮೆಟ್ರಿಕ್ ಟನ್ ಭತ್ತ ದಾವಣಗೆರೆ ಎಪಿಎಂಸಿಯಲ್ಲಿ ಮಾರಾಟವಾಗಿದೆ. ತಾಲ್ಲೂಕಿನ ಭತ್ತದ ಒಟ್ಟು ಉತ್ಪಾದನೆಯಲ್ಲಿ ಕೇವಲ ಶೇ. 8 ರಷ್ಟು ಮಾತ್ರ ಎಪಿಎಂಸಿಯಲ್ಲಿ ಮಾರಾಟವಾಗಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷರಾದ ಬಿ. ನಾಗೇಶ್ವರರಾವ್, ಜೀವನ ಪ್ರಕಾಶ್, ಹೆಚ್.ಜಿ. ಗಣೇಶಪ್ಪ ಕುಂದುವಾಡ, ಹೆಚ್. ಹಾಲಪ್ಪ ಹೂವಿನಮಡು ಉಪಸ್ಥಿತರಿದ್ದರು.

# ಜಿಗಳಿ : ಸರ್ಕಾರಿ ಶಾಲೆಯಲ್ಲಿ ಯೋಗ ದಿನಾಚರಣೆ ಸಂಭ್ರಮ



ಮಲೇಬೆನ್ನೂರು, ಜೂ. 26- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 9ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಗ್ರಾ. ಪಂ. ಅಧ್ಯಕ್ಷರಾದ ಶ್ರೀಮತಿ ವಿನೋದ ಹಾಲೇಶ್‌ಕುಮಾರ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಆನಂದಪ್ಪ ಅವರು ಯೋಗದಿಂದ ಆರೋಗ್ಯ, ಆನಂದ ಸಿಗಲಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಶಾಲೆಯ ಶಿಕ್ಷಕ ಗುಡ್ಡಪ್ಪ, ಯೋಗವನ್ನು ನಮ್ಮ ಜೀವನದ ಶೈಲಿಯನ್ನಾಗಿ ಮಾಡಿಕೊಳ್ಳಬೇಕು. ಯೋಗ ನೈಸರ್ಗಿಕ ಕ್ರಿಯೆ ಕೂಡಾ ಆಗಿದೆ. ಆಧುನಿಕತೆಯನ್ನು ಮೀರಿ ಯೋಗ ಬೆಳೆದಿದೆ. ನಮ್ಮ ದೇಶದಿಂದಾಗಿ ಇಡೀ ವಿಶ್ವವೇ ಯೋಗಾಭ್ಯಾಸ ಮಾಡುವಂತಾಗಿರುವುದು ಭಾರತದ ಹೆಮ್ಮೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಬಿ. ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಕಾರ್ಯದರ್ಶಿ ಸುಜಾತ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷರಾದ ಜಿ.ಪಿ. ಹನುಮಗೌಡ, ಕೆ.ಎಸ್. ಮಾಲತೇಶ್, ಮುದೇನೂರು ಹನುಮಗೌಡ, ಶ್ರೀಮತಿ ಸುನೀತಾ ನಾಗರಾಜ್, ಶ್ರೀಮತಿ ರೇಣುಕಮ್ಮ, ಗ್ರಂಥಾಲಯ ಪಾಲಕರಾದ ಶ್ರೀಮತಿ ಅನಿತಾ ನಾಗರಾಜ್, ಪತ್ರಕರ್ತ ಪ್ರಕಾಶ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸುಧಾ, ಶಿಕ್ಷಕರಾದ ನಾಗೇಶ್, ಲಿಂಗರಾಜ್, ಮಲ್ಲಿಕಾರ್ಜುನ್, ಲೋಕೇಶ್, ಜಯಶ್ರೀ, ದೀಪಾ, ಕುಸುಮ ಮತ್ತಿತರರು ಭಾಗವಹಿಸಿದ್ದರು.

ದೈಹಿಕ ಶಿಕ್ಷಕ ಶ್ರೀನಿವಾಸ್ ರೆಡ್ಡಿ ಅವರು ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸಿದರು.

# ಸರ್ ಎಂ.ವಿ. ಪದವಿಪೂರ್ವ ಕಾಲೇಜಿನಲ್ಲಿ ಮಲೇರಿಯ ನಿರ್ಮೂಲನಾ ಮಾಸಾಚರಣೆ



ದಾವಣಗೆರೆ, ಜೂ.26- ಸರ್‌ಎಂವಿ ಪದವಿಪೂರ್ವ ಕಾಲೇಜಿನಲ್ಲಿ ಮಲೇರಿಯ ನಿರ್ಮೂಲನಾ ಮಾಸಾಚರಣೆ ಆಚರಿಸಲಾಯಿತು.

ಮಲೇರಿಯ, ಡೆಂಗ್ಯೂ ಜ್ವರ, ಚಿಕನ್ ಗುನ್ಯಾ ರೋಗಗಳು ಹೇಗೆ ಬರುತ್ತವೆ ಎಂದು ವೈದ್ಯಾಧಿಕಾರಿ ರಾಘವೇಂದ್ರ ವಿವರಿಸಿದರು. ಜಿಲ್ಲಾ ಸಂಪನ್ಮೂಲ ವ್ಯಕ್ತಿ ಮಲ್ಲಿಕಾರ್ಜುನ ಸಿ.ಪಿ. ಅವರು ರೋಗಗಳು ಹೇಗೆ ಹರಡುತ್ತವೆ ಎಂದು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಪ್ರಕಾಶ್, ಚೆನ್ನೇಶ್ ಮಹಾನಗರ ಪಾಲಿಕೆ ಸದಸ್ಯ ಕುಂಬಾರ ನಾಗರಾಜ್, ಕಾಲೇಜಿನ ಕಾರ್ಯದರ್ಶಿ ಎಸ್.ಜೆ. ಶ್ರೀಧರ್, ಸಂಸ್ಥೆಯ ನಿರ್ದೇಶಕರಾದ ಸೈಯದ್ ಷಂಶೀರ್, ಪ್ರದೀಪ್ ಮತ್ತು ಇತರರು ಭಾಗವಹಿಸಿದ್ದರು.

# ವೆಲ್‌ನೆಸ್ ಫಾರ್‌ಎವರ್ ಮೆಡಿಕಲ್ ಶಾಪ್ ಉದ್ಘಾಟನೆ

ದಾವಣಗೆರೆ, ಜೂ. 26- ನಗರದ ಬಿಐಇಟಿ ಕಾಲೇಜು ರಸ್ತೆಯ ದವನ ಕಾಲೇಜು ಬಳಿ ವೆಲ್‌ನೆಸ್ ಫಾರ್ ಎವರ್ 24x7 ಮೆಡಿಕಲ್ ಶಾಪ್ ಅನ್ನು ದಾವಣಗೆರೆ ಹರಿಹರ ಅರ್ಬನ್ ಕೋ-ಆಪ್ ಬ್ಯಾಂಕ್‌ನ ಉಪಾಧ್ಯಕ್ಷ ಎಸ್.ಕೆ. ವೀರಣ್ಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಾ. ಎ.ಆರ್. ಸಿದ್ದೇಶಿ ಮತ್ತು ಇತರರು ಉಪಸ್ಥಿತರಿದ್ದರು.




# ಶೈಕ್ಷಣಿಕ ಸವಾಲು ಸ್ವೀಕರಿಸಲು ಸಿದ್ಧರಾಗಬೇಕು



ದಾವಣಗೆರೆ, ಜೂ.26- ಓದು, ಅಧ್ಯಯನ, ಸಂಶೋಧನೆಯ ಜೊತೆಗೆ ಶಿಕ್ಷಕರು ಕಲಿಕೆಯ ಆಸಕ್ತಿಯನ್ನು ಬೆಳೆಸಿಕೊಂಡು, ಪ್ರಸ್ತುತ ಸಂದರ್ಭದ ಸವಾಲುಗಳನ್ನು ಸ್ವೀಕರಿಸಲು ಬೌದ್ಧಿಕವಾಗಿ ಸಿದ್ಧರಾಗುವುದು ಅನಿವಾರ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿದ್ದಪ್ಪ ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯ ಯೋಜನೆ, ನಿರ್ವಹಣೆ ಮತ್ತು ಮೌಲ್ಯಮಾಪನ ಮಂಡಳಿ (ಪಿಎಂಇ) ಹಾಗೂ ಕರ್ನಾಟಕ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ (ಕೆಎಎಎಸ್) ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಿಬ್ಬಂದಿಯ ಉತ್ಕೃಷ್ಟತೆಗೆ ಸಂವಾದಾತ್ಮಕ ಚಟುವಟಿಕೆ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪರಂಪರಾಗತ ಜ್ಞಾನವನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಒಯ್ಯುವ ಜೊತೆಗೆ, ತಮ್ಮಲ್ಲಿರುವ ಹೊಸ ಕಲಿಕೆಯ ಜ್ಞಾನವನ್ನು ಮಕ್ಕಳಿಗೆ ಒಯ್ಯುವ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದುದು. ವೃತ್ತಿಪರ ಆಲೋಚನೆ, ಸೇವಾ ಮನೋಭಾವ, ಕಾಯಕ ತತ್ವಗಳನ್ನು ಶಿಕ್ಷಕರು ರೂಢಿಸಿಕೊಳ್ಳಬೇಕು. ಅತ್ಯಾಧುನಿಕ ತಂತ್ರಜ್ಞಾನಗಳ ಆವಿಷ್ಕಾರಗಳನ್ನು ಸದ್ಬಳಕೆ ಮಾಡಿಕೊಂಡು ಮಕ್ಕಳಿಗೆ ಉನ್ನತ ಗುಣಮಟ್ಟದ ಶಿಕ್ಷಣ ನೀಡಲು ಆದ್ಯತೆ ನೀಡಬೇಕು ಎಂದು ಹೇಳಿದರು.


ಕಲಿಕೆ, ಸಂಶೋಧನೆಯ ಜೊತೆಗೆ ಸಾಮಾಜಿಕ ಸಮಸ್ಯೆಗಳ ಪರಿಜ್ಞಾನವನ್ನೂ ಹೊಂದಬೇಕು. ಪ್ರಸ್ತುತ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿ, ಅವುಗಳಿಗೆ ಶಾಶ್ವತ ಪರಿಹಾರ ಒದಗಿಸುವ ಸಂಶೋಧನೆಗಳು ಅತ್ಯಗತ್ಯ. ಚಿಂತನೆ, ಚರ್ಚೆಯಂತಹ ಕ್ರಿಯಾಶೀಲ ಕಾರ್ಯ ಚಟುವಟಿಕೆಯ ಮೂಲಕ ಸಿಬ್ಬಂದಿಯಲ್ಲಿ ಕಾಲಕಾಲಕ್ಕೆ ಚೈತನ್ಯ ತುಂಬುವುದು ಶೈಕ್ಷಣಿಕ ಬೆಳವಣಿಗೆಯ ಭಾಗವಾದಾಗ ಗುಣಾತ್ಮಕ ಫಲಿತಾಂಶವನ್ನು ನಿರೀಕ್ಷಿಸಲು ಸಾಧ್ಯವಿದೆ. ಅದರ ಭಾಗವಾಗಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಾಗಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಮಾತನಾಡಿ, ಓದಿಗಾಗಿ ಓದುವುದು, ಪಾಠಕ್ಕಾಗಿ ಕಲಿಯುವುದಕ್ಕಿಂತ ವಿದ್ಯಾರ್ಥಿಗಳಲ್ಲಿ ಜ್ಞಾನಾಸಕ್ತಿಯನ್ನು ಬೆಳೆಸುವ ನಿಟ್ಟಿನಲ್ಲಿ ಶಿಕ್ಷಕರ ಅಧ್ಯಯನ ಇರಬೇಕು. ಮಾತಿಗಿಂತ ಕೃತಿಯೂ ಅವಶ್ಯ ಎಂದರು.

ತಂತ್ರಜ್ಞಾನದ ಕೊಡುಗೆಯ ಪರಿಣಾಮವಾಗಿ ಶಿಕ್ಷಕರು ಪಾಠ ಹೇಳುವ ಮುನ್ನವೇ ವಿದ್ಯಾರ್ಥಿಗಳು ಅಧ್ಯಯನ ಮಾಡಿ, ತರಗತಿಗೆ ಬಂದಿರುತ್ತಾರೆ. ಆದ್ದರಿಂದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪ್ರಸ್ತುತ ವೈಜ್ಞಾನಿಕ ಬೆಳವಣಿಗೆಯನ್ನು ವಿಭಿನ್ನ ದೃಷ್ಟಿಯಿಂದ ವಿಮರ್ಶಿಸುವ ರೀತಿಯಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಸವಾಲು ನೀಡುವ ರೀತಿಯಲ್ಲಿ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಪರೀಕ್ಷಾಂಗ ಕುಲಸಚಿವ ಡಾ.ಶಿವಶಂಕರ್, ಸಂಪನ್ಮೂಲ ವ್ಯಕ್ತಿ ಮುಕ್ತಾ ಕಾಗಲಿ, ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಶಂಕರ್ ಉಪಸ್ಥಿತರಿದ್ದರು. ಪ್ರಾಧ್ಯಾಪಕ ಪ್ರೊ. ನಾಗಸ್ವರೂಪ ಸ್ವಾಗತಿಸಿದರು. ಪ್ರೊ. ಡಿ.ಜಿ. ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ. ಆರ್. ಶಶಿಧರ ವಂದಿಸಿದರು. ಡಾ. ಭೀಮಾಶಂಕರ ಜೋಶಿ ಕಾರ್ಯಕ್ರಮ ನಿರೂಪಿಸಿದರು.

## ಬಡ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ದನಕ್ಕೆ ಅರ್ಜಿ



ದಾವಣಗೆರೆ, ಜೂ. 26- ಕ್ಷತ್ರೀಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ದಾವಣಗೆರೆ ನಗರ ವ್ಯಾಪ್ತಿಯಲ್ಲಿರುವ ಕ್ಷತ್ರಿಯ ಮರಾಠ ಸಮಾಜದ ಬಡ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಅರ್ಹ ವಿದ್ಯಾರ್ಥಿನಿಯರು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ಅವರ ಜನ ಸಂಪರ್ಕ ಕಚೇರಿ, ಹೊಂಡದ ಸರ್ಕಲ್ ಅಥವಾ ಶ್ರೀ ಶಿವ ಛತ್ರಪತಿ ಶಿವಾಜಿ ಮಹಾರಾಜರ ಹಾಸ್ಟೆಲ್, ಹದಡಿ ರಸ್ತೆ, ದಾವಣಗೆರೆ ಅಥವಾ ಭರಣಿ ಹೋಟೆಲ್ ಮಾಲೀಕರಾದ ಜಿ.ಎಂ. ಪರಶುರಾಮರಾವ್ ಸಾಳಂಕಿ ಅಥವಾ ಶ್ರೀ ಕೃಷ್ಣಾ ಭವಾನಿ ಕಲ್ಯಾಣ ಮಂಟಪ, ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ಆವರಣ, ದಾವಣಗೆರೆ ಇಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಜುಲೈ 5 ರೊಳಗೆ ಸಂಘದ ಕಚೇರಿಗೆ ತಲುಪಿಸಬೇಕು. ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು 94480-05060, 98807-29429, 94483-09883, 98806-42030.

## ಸಾದರ ಸಾಧನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 26- 2022-23 ನೇ ಸಾಲಿನ ಎಸ್ಸೆಸ್ಸೆಲ್ಸಿ (ಸ್ಟೇಟ್, ಸಿಬಿಎಸ್‌ಇ, ಐಸಿಎಸ್‌ಇ) ಪಿಯುಸಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಶೇ. 85 ಕ್ಕೂ ಹೆಚ್ಚು ಅಂಕ ಗಳಿಸಿದ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕರ್ನಾಟಕ ರಾಜ್ಯ ಮಟ್ಟದ ಸಾಧು ಲಿಂಗಾಯತ ಸಮಾಜ ಪ್ರತಿಭಾ ಪುರಸ್ಕಾರ ನೀಡಲು ಸಾದರ ನೌಕರರ ಬಳಗ ಮುಂದಾಗಿದೆ.

ಆಸಕ್ತ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 31 ರೊಳಗಾಗಿ ಅರ್ಜಿಯನ್ನು ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, ಡೋರ್ ನಂ. 1645/145, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9844369744, 94484 39662, 9844501366, 9243312478, 9886339984.

# ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ. 26- ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ನೆಹರು ಯುವ ಕೇಂದ್ರ, ದಾವಣಗೆರೆ ಐಕ್ಯೂಎಸಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ಅಮೃತ ಯುವಕ ಸಂಘ, ಹೊಯ್ಸಳ ಕ್ರೀಡಾ - ಸಾಂಸ್ಕೃತಿಕ ಯುವಕ ಸಂಘದ ಸಂಯುಕ್ತಾಶ್ರಯದಲ್ಲಿ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೈಲ್ವೆ ಇಲಾಖೆಯ ಕೆ.ಬಿ.ಜಯಣ್ಣ ಯೋಗಾಭ್ಯಾಸ ಮಾಡಿದ ನಂತರ ಮಾತನಾಡಿದ ಅವರು, ಯೋಗಕ್ಕೆ ವಯಸ್ಸಿನ ಮಿತಿ ಇಲ್ಲ.

ಪ್ರತಿದಿನ ಯೋಗ ಮಾಡುವುದರಿಂದ ದೀರ್ಘ ಕಾಲದ ಆರೋಗ್ಯ, ಆಯಸ್ಸು ಲಭಿಸುವುದಲ್ಲದೆ, ಪ್ರತಿದಿನದ ಹೊಸ ಚೈತನ್ಯದಿಂದಿರಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಪ್ರಾಂಶುಪಾಲರಾದ ಪ್ರೊ. ಶೈಲಜಾ ಮಾತನಾಡಿ, ಸದೃಢ ದೇಹಕ್ಕೆ ಸದೃಢ ಮನಸ್ಸು ಅವಶ್ಯ. ಯೋಗದಿಂದ ಇವೆಲ್ಲ ಸಾಧ್ಯ. ಯೋಗದಿಂದ ಆಯಸ್ಸು ವೃದ್ಧಿಸುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಐಕ್ಯೂಎಸಿ ಸಂಚಾಲಕ ಪ್ರೊ.ಭೀಮಣ್ಣ, ರಾಷ್ಟ್ರೀಯ ಸೇವಾ ಯೋಜನೆ ಘಟಕದ ಮಹ್ಮದ್ ಅಲಿ, ಶ್ರೀಮತಿ ಸುನಿತಾ, ಸ್ಕೌಟ್ ಅಂಡ್ ಗೈಡ್ಸ್‌ನ ಸಿದ್ಧಲಿಂಗಮ್ಮ, ಡಾ. ಶ್ಯಾಮಲ ಕೆ., ಅನುರಾಧ, ಗೋವಿಂದರಾಜ ಶೆಟ್ರು, ಕರಿಬಸಪ್ಪ, ಧನಂಜಯ, ರಮೇಶ್ ಜಿ. ಹಾಗೂ ವಿದ್ಯಾರ್ಥಿಗಳು ಇದ್ದರು.

## ಕಲಾಕುಂಚದಿಂದ ಮಕ್ಕಳಿಗೆ ಯಕ್ಷಗಾನ ತರಬೇತಿ

ದಾವಣಗೆರೆ, ಜೂ. 26- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ-ಯಕ್ಷಗಾನ ಸಂಸ್ಥೆಯ ಆಶ್ರಯದಲ್ಲಿ ಮಕ್ಕಳಿಗೆ ಯಕ್ಷಗಾನ ಉಚಿತ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ. ಈ ತರಬೇತಿಯನ್ನು ವೃತ್ತಿನಿರತ ಹಿರಿಯ ಯಕ್ಷಗಾನ ಕಲಾವಿದರಾದ ಹಟ್ಟಿಯಂಗಡಿ ಆನಂದ ಶೆಟ್ಟಿಯವರ ನಿರ್ದೇಶನದಲ್ಲಿ ನಡೆಯುವ ಈ ತರಬೇತಿಗೆ 10 ವರ್ಷ ಮೇಲ್ಪಟ್ಟ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 9901770315, 9449374300, 9901122728.

## ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 26- ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಯಲ್ಲಿ ಶೇ.90 ಕ್ಕೂ ಹೆಚ್ಚು ಅಂಕ ಪಡೆದ ಜಿಲ್ಲೆಯ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಂದ 2023 ನೇ ಸಾಲಿನ ಪ್ರತಿಭಾ ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಘದಿಂದ ನಿಗದಿಗೊಳಿಸಿರುವ ನಮೂನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ, ತಾಲ್ಲೂಕು, ಯೋಜನಾ ಶಾಖೆ, ಅಧ್ಯಕ್ಷರು ಗಳಿಂದ ಸೇವಾ ದೃಢೀಕರಣ ಪ್ರಮಾಣ ಪತ್ರವನ್ನು ದೃಢೀಕರಿಸಿ, ಆನ್‌ಲೈನ್ ಲಿಂಕ್‌ನೊಂದಿಗೆ 1.0 ಎಂ.ಬಿ ಮೀರದಂತೆ ಇದೇ ದಿನಾಂಕ 31 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ. ಗುರುಮೂರ್ತಿ (98446 45183) ಅವರನ್ನು ಸಂಪರ್ಕಿಸಲು ಜಿಲ್ಲಾಧ್ಯಕ್ಷ ವೀರೇಶ ಎಸ್. ಒಡೇನಪುರ ತಿಳಿಸಿದ್ದಾರೆ.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇಯರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ
40x60 East, 40x60 North, 20x48 West, 30x50 South, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕಂಪನಿಗಳಿಗೆ ತಕ್ಷಣ ಬೇಕಾಗಿದ್ದಾರೆ**
SSLC, PUC, ITI, Diploma, Degree, ಪಾಸ್ / ಫೇಲ್.
ನೇರ ನೇಮಕಾತಿ.
ಸಂಬಳ : 18000/- ದಿಂದ 70000/-.
ವಸತಿ, ಊಟದ ವ್ಯವಸ್ಥೆ ಇದೆ.
96862 20858

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ, LIC ಕಾಲೋನಿಯಲ್ಲಿ 30x50 East, 35x48 South, 30x38 North, 30x40 West, 30x43 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
97315 12365

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್
2) ಮೆಡಿಕಲ್ ಶಾಪ್ಸ್ ಆರ್ಡರ್ ಬುಕ್ಕಿಂಗ್ ಬಾಯ್ಸ್.
ಎ.ಕೆ.ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 577004

**EC / ಇಸಿ, E-swathu, Khatha Change Building Licence & Other Property Documents**
96118-66449

**WANTED TELECALLERS**
Required with experience visit us 82172 11456 between 11 Am to 1 Pm @ vanitha samaja,PJ extn, Davanagere.Contact :
8217211456

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ
40x60 East, 30x50East, 30x40 East, 30x50 West, 40x60 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಎಂಇಎಸ್ ಶಿಕ್ಷಣ ಸಂಸ್ಥೆ
ಆಂಜನೇಯ ಬಡಾವಣೆ ದಾವಣಗೆರೆ
ಅನುಭವಿ ಆಂಗ್ಲ ಶಿಕ್ಷಕರು, ನರ್ಸರಿ ಪ್ರೈಮರಿಗೆ ಶಿಕ್ಷಕರು, ಬಾಯ್ಸ್ ಹಾಸ್ಟೆಲ್ ವಾರ್ಡನ್, ಶಾಲಾ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
98804 36414, 98800 30171

**ಸೈಟುಗಳು ಮಾರಾಟಕ್ಕಿದೆ**
ಶಿವಗಂಗಾ ಕಲ್ಯಾಣ ಮಂಟಪ ಹಿಂಭಾಗ ಬಂಗ್ಲೆ ಸೈಟು 40 ಅಡಿ ರಸ್ತೆಗೆ ದಕ್ಷಿಣ 60x83, KHB ಕಾಲೋನಿಯಲ್ಲಿ ಪಶ್ಚಿಮ 40x60, ಅಮರನಾಥ ಲೇಔಟ್‌ನಲ್ಲಿ ಪೂರ್ವಕ್ಕೆ 30x35.5
ಬಸವರಾಜ. N
98440 84229

**EMI ನಲ್ಲಿ ದೊರೆಯುತ್ತದೆ**
ಸೀರೆ, ಡ್ರೆಸ್ ಮೆಟೀರಿಯಲ್, ಬೆಡ್ ಶೀಟ್, ಬ್ಲಾಂಕೆಟ್‌ಗಳು ತಿಂಗಳ ಕಂತಿನಲ್ಲಿ ದೊರೆಯುತ್ತದೆ.
call : 81475 47421

**ಮನೆ ಬಾಡಿಗೆಗೆ ಇದೆ**
#853/6 ಮೊದಲನೇ ಹಂತ, ಎರಡನೇ ಮೇನ್, 6ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಸಿಂಗಲ್ ಬೆಡ್ ರೂಂ ಮನೆ ವಿಶಾಲವಾದ ಪಾರ್ಕಿಂಗ್ ಸಿಎಂಸಿ ಹಾಗೂ ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ.
63618 93176

**ಬೇಕಾಗಿದ್ದಾರೆ**
ಪುರುಷರು ಕಛೇರಿಯಲ್ಲಿ ಕಂಪ್ಯೂಟರ್ ಕೆಲಸ ಮಾಡಲು ಬೇಕಾಗಿದ್ದಾರೆ. ಕನ್ನಡ, ಇಂಗ್ಲಿಷ್ ಬಲ್ಲವರಿರಬೇಕು. ವಿದ್ಯಾರ್ಹತೆಯ ಮಿತಿ ಇಲ್ಲ. ಕ್ರಿಯಾಶೀಲತೆಗೆ ಆದ್ಯತೆ. ಯಾವುದೇ ವಯಸ್ಸಿನವರು ಸಂಪರ್ಕಿಸಿ.
Wattsaap no. 94483 38657

**OPEN LAND FOR RENT/LEASE**
1.5 Acre/65000 Sq.ft Open Land (ಖಾಲಿ ಜಮೀನು). P.B. Road, Anagod Highway, Beside RGUHS University New Building. Commercial Purpose, Warehouse/else. Coantact
98444 81661

**ಶೋರೂಂಗೆ ಬೇಕಾಗಿದ್ದಾರೆ**
Shanti Electric Vehicles
Double Decor Furniture
Female - ಮಹಿಳೆಯರು
Computer Office - 02 No.s.
Showroom Sales - 01 No.s
Male - ಪುರುಷರು
Showroom Sales - 02, Mechanics - 02
BSNL Circle, Davangere.
92432 19553

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ಮೊದಲನೇ ಮಹಡಿ 3 ಬೆಡ್ ರೂಂ
94821 09010
94486 67114

**WANTED**
SALESMAN FOR COLGET PALMOLIVE
CONTACT :
VEERANARAYANA TRADERS
N.R. ROAD, DAVANGERE.
98860 97065

**ಸೈಟು ಕೊಳ್ಳಲು ಬೇಕಾಗಿರುತ್ತದೆ**
ದಾವಣಗೆರೆ
(All Dimension)
Contact owners only.
Sharma : 63608 66997

**SSLC/PUC ಪಾಸ್ /ಫೇಲ್ ಮುಂದೇನು..?**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್- 2 ವರ್ಷ
ವಿದ್ಯಾರ್ಹತೆ : SSLC/PUC pass/ fail.
ನೇರ ಪರೀಕ್ಷೆಗಳು : PUC : ARTS / COMM/SCIENCE.
ಸಂಪರ್ಕಿಸಿ: ಗಂಗೋತ್ರಿ ಕಮ್ಯುನಿಟಿ ಕಾಲೇಜ್ ಲಾಯರ್ ರಸ್ತೆ, ದಾವಣಗೆರೆ.
86602 35013

**WANTED**
Female for office work - 2.
Age below 30.
Sales for Boys - 2
Basveshwara Pharma
84310 22744

**ಸೈಟು ಮಾರಾಟಕ್ಕಿದೆ**
ಸಂತೇಬೆನ್ನೂರು
ಸ್ಟೇಟ್ ಹೈವೇ 48ರಲ್ಲಿ 80x60 ಅಡಿ ಅಳತೆಯ ಮೇನ್ ಸರ್ಕಲ್ ಹತ್ತಿರ ಕಮರ್ಷಿಯಲ್ ಫ್ರಂಟ್ ಸೈಟ್ ಸ್ಟೇಟ್ ಹೈವೇ 76ಕ್ಕೆ 400 ಮೀಟರ್ ಹತ್ತಿರದಲ್ಲಿದೆ.
99807 66410

**ಬೇಕಾಗಿದ್ದಾರೆ**
Office Boy ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
Contact :
B.G. Basavarajappa, Tax Practioner
99001 42052

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED FOR LODGE**
Manager-Graduates with Experienced Prefered
Salary-Rs. 10,000 to upto 15,000 pm
98440 65235

**We are Hiring**
Opening in back office work.
Female : No. of Post - 2
Expe : Micrsoft Excel.
Fresher can also Apply.
94822 57570

**WANTED**
Om Dental Care `Ram & Co Circle' Davanagere.
1) BDS Dentist
2) Attender : 5 PM to 9PM
Contact :
90669 93738

**ಬಾಡಿಗೆಗೆ ಇದೆ**
ಶ್ರೀ ವಿನಯ್ ಎಂಟರ್ ಪ್ರೈಸಸ್‌ರವರ ಮೊದಲನೇಯ 20x100 ಮಹಡಿ (1ನೇ ಫ್ಲೋರ್) ಬಾಡಿಗೆಗೆ ಇದೆ. ವಿಚಾರಿಸಿರಿ. ವಿಳಾಸ : RMC ರೋಡ್, ಬಂಬೂ ಬಜಾರ್, ಹೆಚ್.ಪಿ. ಪೆಟ್ರೋಲ್ ಬಂಕ್ ಪಕ್ಕ, ದಾವಣಗೆರೆ.
94486 67685, 88926 81923

**TO-LET**
Commercial Space available for rent 1st and 2nd floor at 8th Main, P J Extension. Contact:
95350 00532, 98809 00806

**ಯಾವುದೇ ಬ್ರೋಕರೇಜ್ ಇಲ್ಲದೆ ಪ್ರಾಪರ್ಟಿ ಬಾಡಿಗೆ/ ಖರೀದಿ/ಮಾರಾಟಕ್ಕೆ**
'VICHAAR' ಆಪ್ ಅನ್ನು Playstore ನಿಂದ Download ಮಾಡಿಕೊಂಡು ನೇರವಾಗಿ ಮಾಲೀಕರಿಗೆ ಸಂಪರ್ಕಿಸಿ.
ಹೆಚ್ಚಿನ ಮಾಹಿತಿಗಾಗಿ
848 000 2915

**WANTED**
Om Dental Care `Ram & Co Circle' Davanagere.
1) BDS Dentist
2) Attender : 10AM to 2PM
Contact :
90669 93738

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**NEW APARTMENT**
2 BHK, Few Houses are Available for Rent, Ready for Immediate Accupency
Please Contact :
98806 86882

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್‌ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
88616 89590

**ಮನೆ ಮಾರಾಟಕ್ಕಿದೆ**
ಸೈಜ್ 20x30 D.No- 564/20/84 ಚಾಮುಂಡಿ ಲೇಔಟ್, 4ನೇ ಕ್ರಾಸ್, ಸರಸ್ವತಿ ನಗರ, ದಾವಣಗೆರೆ - 577008.
95355 92501

**ಸೈಟ್‌ಗಳು ಮಾರಾಟಕ್ಕಿವೆ**
30x52 ಉತ್ತರ ಡಾಲರ್ಸ್‌ಕಾಲೋನಿ, 33x50 ಪೂರ್ವ ಸಿದ್ಧವೀರಪ್ಪ ಬಡಾವಣೆ, 44x60 ಪಶ್ಚಿಮ, ಎಂ.ಸಿ.ಸಿ.'ಬಿ' ಬ್ಲಾಕ್, 30x50 ದಕ್ಷಿಣ ವಿನಾಯಕ ಬಡಾವಣೆ.
ಏಜೆಂಟರು S. ಯಲ್ಲೋಜಿ ರಾವ್
97418 11694

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**TO-LET**
2-BHK, 1st floor (East facing) # 303/4, Rohini Complex, P.J. Extension, 2nd main Road, Stadium Road, Davangere.
9611174878, 8970789513

# ಮಾದಕ ವಸ್ತುಗಳಿಗೆ ಯುವ ಸಮೂಹ ಬಲಿ

## ಜಗಳೂರಿನ ಬ್ರಹ್ಮಾಕುಮಾರೀಸ್ ಸಂಸ್ಥೆಯ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಸಂತೋಷ್ ಕುಮಾರ್



ಜಗಳೂರು,ಜೂ.26- ಯುವ ಸಮೂಹ ಮಾದಕ ವಸ್ತುಗಳ ಬಳಕೆಯಿಂದ ಕ್ಯಾನ್ಸರ್ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಇಂದಿನ ಯುವಕ, ಯುವತಿಯರು ಸಮಾಜದ ಸ್ವಾಸ್ಥ್ಯ ವನ್ನು ಕಾಪಾಡಬೇಕಿದೆ ಎಂದು ತಹಶೀಲ್ದಾರ್ ಸಂತೋಷ ಕುಮಾರ್ ತಿಳಿಸಿದರು.

ಪಟ್ಟಣದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ರಾಜಯೋಗ ಭವನದಲ್ಲಿ ಇಂದು ನಡೆದ ವಿಶ್ವ ಮಾದಕ ವಸ್ತು ಸೇವನೆ ನಿಷೇಧ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳು ನಮ್ಮ ಸಮಾಜವನ್ನು ಹಾಳುಮಾಡುತ್ತಿವೆ.ಇವತ್ತಿನ ಜಗತ್ತಿನಲ್ಲಿ ಮೊಬೈಲ್, ಇಂಟರ್ನೆಟ್ ಅತಿ ವೇಗವಾಗಿ ಚಲಿಸುತ್ತಿವೆಯೊ ಅದೇ ರೀತಿ ಮಾದಕ ವಸ್ತು ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಭಾರತಿ ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಯುವ ಸಮೂಹ ಮಾದಕ ವ್ಯಸನಿಗಳಾಗಿ ನಾನಾ ದುಶ್ಚಟಗಳಿಗೆ ಬಲಿಯಾಗುತಿದ್ದಾರೆ.

ಮನುಷ್ಯ ಮಾನಸಿಕ ಹಾಗೂ ದೈಹಿಕವಾಗಿ ಸದೃಢವಾಗಿರಲು ಅಧ್ಯಾತ್ಮ ಚಿಂತನೆ ಅಳವಡಿಸಿದರೆ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಪಿ.ಎಸ್. ಅರವಿಂದ್ ಮಾತನಾಡಿ, ಇತ್ತೀಚಿನ ಯುವಕ -ಯುವತಿಯರು ಮಾದಕ ವಸ್ತು ಸೇವನೆಯಿಂದ ಮಾನಸಿಕ ಹಾಗೂ ದೈಹಿಕವಾಗಿ ಖಿನ್ನತೆಗೆ ಬಲಿಯಾಗುತಿದ್ದಾರೆ.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದರು.

ಈ ಸಂದರ್ಭದಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯದ ತೋರಂಗಲ್ ಸಂಚಾಲಕರಾದ ಬ್ರಹ್ಮಾಕುಮಾರಿ ರಾಜೇಶ್ವರಿ, ಪ್ರೇರಣಾ ಸಮಾಜ ಸೇವಾ ಸಂಸ್ಥೆ ಸಹ ನಿರ್ದೇಶಕ ಫಾದರ್ ರೊನಾಲ್ಡ್ ಸೇರಿದಂತೆ ಸಿದ್ಧಾರ್ಥ ಬಿಇಡಿ ಕಾಲೇಜು ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಮತ್ತಿತರರಿದ್ದರು.

# ಧರ್ಮಸ್ಥಳದ 'ಸುಜ್ಞಾನ ನಿಧಿ' ಯಿಂದ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ 82.52 ಕೋಟಿ ಶಿಷ್ಯ ವೇತನ




ಹರಪನಹಳ್ಳಿ,ಜೂ.26- ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ರಜತ ಮಹೋತ್ಸವದ ಅಂಗವಾಗಿ 'ಸುಜ್ಞಾನ ನಿಧಿ' ಯೋಜನೆ ಯನ್ನು ಜಾರಿಗೆ ತಂದಿದ್ದು, ಕಳೆದ 15 ವರ್ಷಗಳಿಂದ ನಿರಂತರವಾಗಿ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವನ್ನು ನೀಡಲಾಗುತ್ತಿದೆ ಎಂದು ಯೋಜನೆಯ ಜಿಲ್ಲಾ ನಿರ್ದೇಶಕ ಜನಾರ್ದನ ತಿಳಿಸಿದ್ದಾರೆ.

ಪಟ್ಟಣದ ಕಾಶಿ ಸಂಗಮೇಶ್ವರ ಬಡಾವಣೆಯ ಲ್ಲಿರುವ ಸಂಘದಲ್ಲಿ ಸುಜ್ಞಾನ ನಿಧಿ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಸಂಸ್ಥೆಯು ಸಾಮಾಜಿಕ, ಆರ್ಥಿಕವಾಗಿ ಸಬಲರಾಗಲು ಸಮಾಜ ಮುಖಿಯಾಗಿ 40ಕ್ಕೂ ಹೆಚ್ಚು ಯೋಜನೆಗಳ ಮೂಲಕ ಪಾರದರ್ಶಕವಾಗಿ ಕೆಲಸ ನಿರ್ವಹಿಸುತ್ತಿದೆ ಎಂದ ಅವರು, ರಾಜ್ಯದಲ್ಲಿ ಒಟ್ಟು 26200 ವಿದ್ಯಾರ್ಥಿಗಳಿಗೆ 82.52 ಕೋಟಿ ರೂ.ಗಳ ಶಿಷ್ಯವೇತನ ನೀಡಿದೆ ಎಂದು ಅವರು ವಿವರಿಸಿದರು.

ತಾಲ್ಲೂಕು ಯೋಜನಾಧಿಕಾರಿ ಶಾಂತರಾಮ ವಿಠಲ್ ಮಾತನಾಡಿ, ಧರ್ಮಸ್ಥಳ ಸಂಸ್ಥೆ ಕೇವಲ ಸಾಲ ಸೌಲಭ್ಯ ಕೊಡುವುದು ಮಾತ್ರವಲ್ಲ, ಅನೇಕ ಯೋಜನೆಗಳ ಮೂಲಕ ಸಾಮಾಜಿಕವಾಗಿ, ಶೈಕ್ಷಣಿ ಕವಾಗಿ, ಆರ್ಥಿಕವಾಗಿ ಅನುಕೂಲವನ್ನು ಕಲ್ಪಿಸು ತ್ತಿದೆ. ತಾಲೂಕಿನಲ್ಲಿ ಒಟ್ಟು 103 ವಿದ್ಯಾರ್ಥಿಗಳು ಪ್ರಸಕ್ತ ವರ್ಷದ ಫಲಾನುಭವಿಗಳಾಗಿದ್ದಾರೆ. ಪ್ರತಿಯೊಬ್ಬರು ಸಹ ಸಂಘದ ಚಟುವಟಿಕೆಯಲ್ಲಿ ತೊಡಗಿಕೊಂಡು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪತ್ರಕರ್ತ ಪಿ.ಕರಿಬಸಪ್ಪ ಮಾತನಾಡಿ, ಧರ್ಮಸ್ಥಳ ಸಂಸ್ಥೆ ಕೃಷಿ, ಶಿಕ್ಷಣ, ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡುವ ಮುಖಾಂತರ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದ್ದು, ವಿದ್ಯಾರ್ಥಿಗಳು ವಿದ್ಯಾನಿಧಿಯನ್ನು ಸದ್ಬಳಕೆ ಮಾಡಿಕೊಂಡು ಸಾಧನೆ ಮಾಡಿದಾಗ ಮಾತ್ರ ಇಂತಹ ವೇತನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ವಿಶಾಲ, ರಾಜಶೇಖರ, ಸುರೇಶ್, ಗಾಯತ್ರಿ, ಅಂಬಿಕಾ, ಚೋಳರಾಜ, ಸೇರಿದಂತೆ ಪೋಷಕರು, ವಿದ್ಯಾರ್ಥಿಗಳು ಇದ್ದರು.

## ನಗರದಲ್ಲಿ ಇಂದು ಹೈನುಗಾರಿಕೆ ಶಿಬಿರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು 25 ರೈತರಿಗೆ ಆಧುನಿಕ ಹೈನುಗಾರಿಕೆ ತರಬೇತಿ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

## ಓದುಗರ ಪತ್ರ

### ರಾಜ್ಯ ಸರ್ಕಾರ ಬಸ್ ಕಂಡಕ್ಟರ್‌ಗಳ ನೆರವಿಗೆ ನಿಲ್ಲಲಿ

**ಮಾನ್ಯರೇ,**

ಕಾಂಗ್ರೆಸ್ ಸರ್ಕಾರದ ಪ್ರಮುಖ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಜಾರಿಯಾದಾಗಿನಿಂದ ಇಲ್ಲಿಯವರೆಗೂ ಕೆಎಸ್ಆರ್ಟಿಸಿ ಬಸ್ ನಿರ್ವಾಹಕರು ಮಾತ್ರ ನಿತ್ಯ ಹೈರಾಣಾಗುತ್ತಿದ್ದಾರೆ.

ಉಚಿತ ಪ್ರಯಾಣ ಎಂಬ ಕಾರಣದಿಂದ ಮಹಿಳೆಯರು ಪ್ರತಿನಿತ್ಯ ಗುಂಪು ಗುಂಪಾಗಿ ಹೊರಗೆ ಬರುತ್ತಿರುವುದರಿಂದ, ದಿನನಿತ್ಯ ಅಡ್ಡಾಡುವ ಉದ್ಯೋಗಿಗಳು, ವಯೋವೃದ್ದರು, ವಿದ್ಯಾರ್ಥಿಗಳಿಗೂ ಕೂಡ ಬಸ್ ಇಲ್ಲದಂತಾಗಿ ಪರದಾಡುತ್ತಿದ್ದಾರೆ. ಇನ್ನೊಂದೆಡೆ ಬಸ್‌ಗಳು ಪ್ರಯಾಣಿಕರಿಂದ ತುಂಬಿ ತುಳುಕುತ್ತಿರುವುದರಿಂದ, ಕಂಡಕ್ಟರ್‌ಗಳಿಗೂ ಕೂಡ ಒತ್ತಡ ಹೆಚ್ಚಾಗುತ್ತಿದೆ. ಅಲ್ಲಲ್ಲಿ ಪ್ರಯಾಣಿಕರ ಸಾವು-ನೋವುಗಳು ಕೂಡ ಉಂಟಾಗಿವೆ.

ಕ್ಷುಲ್ಲಕ ಕಾರಣಗಳ ನೆಪವೊಡ್ಡಿ, ಪ್ರಯಾಣಿಕರುಗಳು ಕಂಡಕ್ಟರ್‌ಗಳ ಜೊತೆ ಜಗಳಕ್ಕೆ ಇಳಿಯುತ್ತಾರೆ, ನಿನ್ನೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಸಮೀಪ ಕಂಡಕ್ಟರ್ ಮೇಲೆಯೇ ಪ್ರಯಾಣಿಕರೊಬ್ಬರು ಹಲ್ಲೆ ಮಾಡುತ್ತಿರುವ ದೃಶ್ಯ ಎಲ್ಲೆಡೆ ವೈರಲ್ ಆಗಿದ್ದು ನಿಜಕ್ಕೂ ಇದು ಅಮಾನವೀಯ ಎನಿಸಿತು.

ಇಂತಹ ಅಹಿತಕರ ಘಟನೆಗಳು ರಾಜ್ಯದಾದ್ಯಂತ ಪ್ರತಿ ನಿತ್ಯ ನಡೆಯುತ್ತಲೇ ಇವೆ. ರಾಜ್ಯ ಸರ್ಕಾರವೇನೋ ಉಚಿತ ಪ್ರಯಾಣದ ಯೋಜನೆ ತಂದಿದೆ, ಇದರಿಂದ ಕಂಡಕ್ಟರ್ ಗಳ ಗೋಳು ಹೇಳುತೀರದು. ತಮ್ಮ ಕುಟುಂಬವನ್ನು ವಾರಗಟ್ಟಲೇ ತೊರೆದು ಎಂತಹ ಕಷ್ಟಕರ ಸನ್ನಿವೇಶದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ದಯವಿಟ್ಟು ರಾಜ್ಯ ಸರ್ಕಾರ ಇದಕ್ಕೊಂದು ಪರಿಹಾರ ದೊರಕಿಸಿಕೊಡುವ ಮೂಲಕ ಬಸ್ ಕಂಡಕ್ಟರ್ ಗಳ ಹಿತ ಕಾಯಬೇಕಾಗಿದೆ.

**- ಮುರುಗೇಶ ಡಿ.,** ಹವ್ಯಾಸಿ ಬರಹಗಾರರು, ದಾವಣಗೆರೆ.

### ಹರಿಹರ ಬಸ್‌ಸ್ಟ್ಯಾಂಡ್‌ನ ಸುತ್ತ

**ಮಾನ್ಯರೇ,**

ಮಧ್ಯ ಕರ್ನಾಟಕದ ಹೆಬ್ಬಾಗಿಲು ಹರಿಹರ. ಈ ಪ್ರದೇಶಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಜೊತೆಗೆ ಮಠ-ಮಾನ್ಯಗಳ ಮಹತ್ವದ ಬೀಡಾಗಿದೆ. ಅಂತೆಯೇ ನಮ್ಮ ಹಿರಿಯರು ಒಂದು ಮಾತನ್ನು ಹೇಳುತಿದ್ದರು 'ಹರಿಹರದ ಬಸ್‌ಸ್ಟ್ಯಾಂಡ್ ಎಂದರೆ ಮಧ್ಯರಾತ್ರಿಯೂ ಕೂಡಾ ಜಾತ್ರೆ, ಸಂತೆ, ಇದ್ದಂತೆ ಇರುತ್ತದೆ, ಪ್ರಯಾಣಿಕರು ನಿರಂತರವಾಗಿ, ನಿರಾಳವಾಗಿ ಪ್ರಯಾಣ ಮಾಡಬಹುದು ಎನ್ನುತ್ತಿದ್ದರು. ಆದರೆ ಅತಿ ಜನಭರಿತ ಪ್ರದೇಶವಾಗಿರುವ ಹರಿಹರದ ಬಸ್‌ಸ್ಟ್ಯಾಂಡ್‌ನಲ್ಲಿ ಇಂದಿನ ದುಸ್ಥಿತಿ ಹೇಳತೀರದು. ಬಸ್‌ಸ್ಟ್ಯಾಂಡ್ ಸುತ್ತಮುತ್ತ ಮಲಮೂತ್ರ ವಿಸರ್ಜನೆಯಿಂದಾಗಿ ಕೊಳಕು, ದುರ್ವಾಸನೆಯಿಂದ ನಾರುತ್ತಿದೆ. ರೋಗ ರುಜಿನಗಳ ಉಗಮ ತಾಣವಾಗಿದೆ.

ಬೆಳಕಿನ ವ್ಯವಸ್ಥೆ, ಸ್ವಚ್ಛತೆ, ಆಸನಗಳ ಕೊರತೆ. ಮದ್ಯವ್ಯಸನಿಗಳ ಗೂಡಾಗಿರುವ ಇಲ್ಲಿ ರಾತ್ರಿ ವೇಳೆ ಕುರುಡು ಕಾಂಚಾಣದ ಧ್ವನಿ ರಾರಾಜಿಸುತ್ತಿರುತ್ತದೆ. ಮಹಿಳೆಯರ ಸುರಕ್ಷತೆಯಂತೂ ದೂರದ ಮಾತು. ದಾವಣಗೆರೆ ಜಿಲ್ಲೆಯಾದರೂ, ಪಕ್ಕದ ಹರಿಹರವು ಅನೇಕ ಹಳ್ಳಿಗಳ ಸಂಗಮ ವಾಗಿದೆ. ಆದರೆ ಇಂದು ಇಲ್ಲಿ ನಿರ್ಭೀತಿ ಮಾಯವಾಗಿ ಜನರು ಭೀತಿಯಿಂದ ಬದುಕುವಂತಾಗಿದೆ. ರಾತ್ರಿ ವೇಳೆ ಸ್ತ್ರೀಯರು ಇರಲಿ, ಪುರುಷರೇ ಭಯದಿಂದ ಓಡಾಡುವಂತಾಗಿದೆ. ದಯವಿಟ್ಟು ಶಾಸಕರು, ಸಂಬಂಧಪಟ್ಟ ಉಸ್ತುವಾರಿಗಳು ಇತ್ತ ಗಮನ ಹರಿಸಬೇಕು.

**-ಪದ್ಮರಾಜ ಬಿ.,ಹರಿಹರ.**

### ಬೆಂಗಳೂರು-ಪುಣೆ ರೈಲು ಮಾರ್ಗ ಕಾಮಗಾರಿ ಶೀಘ್ರ ಪೂರೈಸಬೇಕು

**ಮಾನ್ಯರೇ,**

ಬೆಂಗಳೂರು - ಪುಣೆ ಜಂಕ್ಷನ್ ಹಾಗು ಪುಣೆ ಜಂಕ್ಷನ್‌ನಿಂದ ದಿನವೂ ಸುಮಾರು 30ಕ್ಕೂ ಹೆಚ್ಚು ಎಕ್ಸ್‌ಪ್ರೆಸ್ ಹಾಗು ಪ್ಯಾಸೆಂಜರ್ ರೈಲು ಗಾಡಿಗಳು ಸಾಗುತ್ತವೆ. ಹಾಗಾಗಿ ಈ ಮಾರ್ಗದ ರೈಲು ಹಳಿಗಳ ಮೇಲೆ ಒತ್ತಡ ಜಾಸ್ತಿ ಆಗಿದೆ ಹಾಗು ಪ್ರಯಾಣಿಕರ ಸಂಖ್ಯೆ ಕೂಡ ವರ್ಷದಿಂದ ವರ್ಷ ಜಾಸ್ತಿ ಆಗುತ್ತಿದೆ.

ರೈಲು ಗಾಡಿಗಳು ಕ್ರಾಸಿಂಗ್ ಸಮಸ್ಯೆಯಿಂದ ಸರಿ ಸುಮಾರು 20 ರಿಂದ 25 ನಿಮಿಷ ತಡವಾಗಿ ಆಗಮಿಸುತ್ತಿರುವುದು ಸಾಮಾನ್ಯವಾಗಿದೆ. ಆದುದರಿಂದ ಬೆಂಗಳೂರು-ಪುಣೆ ಜಂಕ್ಷನ್ ಮಾರ್ಗದ ಬಾಕಿ ಇರುವ ಬೆಳಗಾವಿ , ಮೀರಜ್, ಸಾಂಗ್ಲಿ ರೈಲು ಮಾರ್ಗವನ್ನು ಮಾರ್ಚ್ 2024 ಒಳಗೆ ಆದ್ಯತೆ ಮೇರೆಗೆ ಆದಷ್ಟು ಬೇಗನೆ ದ್ವಿಪತ ಮಾರ್ಗ ಹಾಗು ವಿದ್ಯುದೀಕರಣ ( ಚಿಕ್ಕಬಾಣಾವರ - ಅರಸೀಕೆರೆ - ದಾವಣಗೆರೆ - ಹಾವೇರಿ - ಹುಬ್ಬಳಿ - ಬೆಳಗಾವಿ, ಮೀರಜ್ , ಸಾಂಗ್ಲಿ ಮಾರ್ಗ ) ಮಾರ್ಚ್ 2024 ರ ಒಳಗೆ ಮುಗಿಸಿ ರೈಲು ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಧಾರವಾಡ-ಬೆಂಗಳೂರು ವಯಾ ದಾವಣಗೆರೆ-ಸೆಮಿ ಹೈಸ್ಪೀಡ್ ರೈಲು ವಂದೇ ಭಾರತ್ ಆದಷ್ಟು ಬೇಗ ಓಡಿಸಬೇಕು.

**ರೋಹಿತ್ ಎಸ್. ಜೈನ್,**
ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘ, ದಾವಣಗೆರೆ.

# ಮುಸ್ಲಿಂ ಬಾಂಧವ್ಯ ವೇದಿಕೆಯ ಪದಾಧಿಕಾರಿಗಳ ಪದಗ್ರಹಣ



ದಾವಣಗೆರೆ, ಜೂ. 26- ಸಾಮಾಜಿಕ ಬಾಂಧವ್ಯದ ಆಶಯ ಹೊಂದಿರುವ ಮುಸ್ಲಿಂ ಸಮುದಾಯದ ಧರ್ಮ ಗುರುಗಳು, ಲೇಖಕರು, ಚಿಂತಕರು, ಸಾಹಿತಿಗಳು ಮತ್ತು ಸಾಧಕರ ವೇದಿಕೆ ಯಾಗಿರುವ ಮುಸ್ಲಿಂ ಬಾಂಧವ್ಯ ವೇದಿಕೆಯ ವಾರ್ಷಿಕ ಪದಗ್ರಹಣ ಸಮಾರಂಭವು ನಗರದ ಬಾಪೂಜಿ ಸಭಾ ಭವನದಲ್ಲಿ ನಿನ್ನೆ ನಡೆಯಿತು.

ವೇದಿಕೆಯ ನೂತನ ಪದಾಧಿಕಾರಿಗಳಿಗೆ ನಿವೃತ್ತ ನ್ಯಾಯಾಧೀಶರಾದ ವಿಜಯಪುರದ ನಬಿರಸೂಲ್ ಮಹಮದಾಪುರ ಅವರು ಪದವಿ ಪ್ರದಾನ ಮಾಡಿದರು.

ಸ್ಥಳೀಯ ನ್ಯಾಯವಾದಿ ಅನೀಸ್ ಪಾಷಾ ಅಧ್ಯಕ್ಷರಾಗಿ ಮತ್ತು ಉಡುಪಿಯ ಮುಷ್ತಾಕ್ ಹೆನ್ನಾಬೈಲ್ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇದೇ ವೇಳೆ ಮಾತನಾಡಿದ ನಬಿರಸೂಲ್ ಮಹಮದಾಪುರ್ ಅವರು, ಸೌಹಾರ್ದ ಸಮಾಜ ನಿರ್ಮಾಣಕ್ಕಾಗಿ ಬಹಳಷ್ಟು ವೇದಿಕೆ-ಸಂಘಟನೆಗಳು ಹುಟ್ಟಿಕೊಂಡಿವೆ. ಆದರೆ ಈ ವೇದಿಕೆ ಸಮುದಾಯದ ಅತ್ಯಂತ ಪ್ರಜ್ಞಾವಂತರು ಮತ್ತು ಪ್ರಬುದ್ಧ ಸಾಧಕರಿಂದ ಕೂಡಿದ ಸಂಘಟನೆಯಾಗಿದೆ ಎಂದರು.

ವೇದಿಕೆಯ ನೂತನ ಅಧ್ಯಕ್ಷ ಅನಿಸ್ ಪಾಷಾ ಮಾತನಾಡಿ, ಯಾವುದೇ ಒಂದು ಸಮುದಾಯ ಮುಂದುವರೆಯಬೇಕಾದರೆ ಆ ಸಮುದಾಯದ ನಾಯಕರ ಮುಂದಾಳತ್ವದ ಅವಶ್ಯಕತೆ ಇದೆ. ಆದರೆ ಮುಸ್ಲಿಂ ಸಮುದಾಯದಲ್ಲಿ ಈಗ ನಾಯಕ ತ್ವದ ಕೊರತೆ ಇದೆ. ಈ ಸಂಘಟನೆಯು ಮುಂದಿನ ದಿನಗಳಲ್ಲಿ ಪ್ರತಿಯೊಂದು ಸಮುದಾಯದ ಮಧ್ಯೆ ಬಾಂಧವ್ಯದ ಕೊಂಡಿಯನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತದೆ ಎಂದು ತಿಳಿಸಿದರು.

2024-25 ನೇ ಸಾಲಿಗೆ ಆಯ್ಕೆಯಾದ ಕಾರ್ಯದರ್ಶಿ ಡಾ. ಹಕೀಮ್ ತೀರ್ಥಹಳ್ಳಿ ನೂತನ ಅಧ್ಯಕ್ಷರ ಪರಿಚಯ ಮಾಡಿದರು. ಸದಸ್ಯ ಅಸ್ಲಮ್ ಹೈಕಾಡಿ ನೂತನ ಕಾರ್ಯದರ್ಶಿಯವರ ಪರಿಚಯ ಮಾಡಿದರು.

ಕಾರ್ಯದರ್ಶಿ, ಲೇಖಕ ಮುಷ್ತಾಕ್ ಹೆನ್ನಾಬೈಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಸೈಯದ್ ನಿಜಾಮುದ್ದೀನ್ ನಿರೂಪಿಸಿದರು. ಅಬ್ದುಲ್ ರೌಫ್ ವಂದಿಸಿದರು.

ಧರ್ಮಗುರುಗಳು ಹಾಗೂ ವೇದಿಕೆಯ ಗೌರವಾಧ್ಯಕ್ಷರಾಗಿ ಮಂಗಳೂರಿನ ಎಸ್. ಬಿ. ದಾರಿಮಿ, 2024-25ರ ಸಾಲಿಗೆ ಆಯ್ಕೆಯಾದ ಅಧ್ಯಕ್ಷ ಹಾವೇರಿಯ ಹಿರಿಯ ಕವಿ ಖಾದರ್ ಮೊಹಿಯುದ್ದೀನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಸೌಹಾರ್ದ ಕಾರ್ಯಕ್ರಮದ ಭಾಗವಾಗಿ ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಗಳನ್ನು ಮಠದಲ್ಲಿ ಮುಸ್ಲಿಂ ಬಾಂಧವ್ಯ ವೇದಿಕೆಯ ನಿಯೋಗ ಭೇಟಿಯಾಗಿ ಮಾತುಕತೆ ನಡೆಸಿತು.



## ಎ.ಜಿ.ಬಿ. ಕಾಲೇಜಿನಲ್ಲಿ ಸಾಂಪ್ರದಾಯಿಕ ದಿನಾಚರಣೆ

ದಾವಣಗೆರೆ, ಜೂ. 26- ನಗರದ ಎ.ಜಿ.ಬಿ. ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಪ್ರದಾಯಿಕ ದಿನವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಪ್ರತಿ ತರಗತಿಯಲ್ಲೂ ವಿವಿಧ ಬಗೆಯ ಹಬ್ಬಗಳ ವಾತಾವರಣ ನಿರ್ಮಾಣ ಮಾಡಿದ್ದು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಇದೇ ವೇಳೆ ಪ್ರಾಂಶುಪಾಲರು ಮಾತನಾಡಿ, ದೇಶದ ಸಂಸ್ಕೃತಿ ಗೌರವಿಸಲು ಇಂತಹ ಸಾಂಪ್ರದಾಯಿಕ ದಿನದ ಆಚರಣೆ ಅಗತ್ಯ ಎಂದರು.

## ಕುರುಹಿನಶೆಟ್ಟಿ ಸಮಾಜದಿಂದ ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ದಾವಣಗೆರೆ, ಜೂ. 26- ಶ್ರೀ ಕುರುಹಿನಶೆಟ್ಟಿ (ನೇಕಾರ) ಸಮಾಜ ಕೇಂದ್ರ ಮತ್ತು ಸ್ಥಳೀಯ ಸಂಘದಿಂದ ಪ್ರತಿಭಾ ಪುರಸ್ಕಾರ ಹಾಗೂ ಪ್ರೋತ್ಸಾಹ ಧನ ನೀಡಲು ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2022-23 ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಶೇ. 85 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ. 80 ರಷ್ಟು ಅಂಕ ಪಡೆದು ಉತ್ತೀರ್ಣರಾದ ಕುರುಹಿನಶೆಟ್ಟಿ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಜುಲೈ 15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಸಮಾಜದ ಆಸಕ್ತ ವಿದ್ಯಾರ್ಥಿಗಳು ಶ್ರೀ ನೀಲಕಂಠೇಶ್ವರ ದೇವಸ್ಥಾನ, ಕೆಟಿಜೆ ನಗರ 14 ನೇ ಕ್ರಾಸ್, 2 ನೇ ಮೇನ್, ದಾವಣಗೆರೆ ಇಲ್ಲಿ ಅರ್ಜಿ ಫಾರಂಗಳನ್ನು ಪಡೆದು ಸಲ್ಲಿಸಬೇಕು. ವಿವರಗಳಿಗೆ 94492-93249 ಕಾರ್ಯದರ್ಶಿ, ಕುರುಹಿನಶೆಟ್ಟಿ (ನೇಕಾರ) ಸಮಾಜ ಸಂಘ ದಾವಣಗೆರೆ ಇವರನ್ನು ಸಂಪರ್ಕಿಸಬಹುದು.

## ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಜೂ.26- ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಗದಾಗಿ ವಿದ್ಯಾರ್ಥಿ ವೇತನ ವಿತರಿಸುವ ಯೋಜನೆ ಹಮ್ಮಿಕೊಂಡಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಸಿ.ಆರ್. ವಿರೂಪಾಕ್ಷಪ್ಪ ತಿಳಿಸಿದ್ದಾರೆ.

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಮುದಾಯದ ಮಕ್ಕಳಿಗೆ ಸಾರ್ವಜನಿಕವಾಗಿ ಕೊಡಮಾಡುವ ವಿದ್ಯಾರ್ಥಿ ವೇತನ ಶೇ.85 ರಷ್ಟು ಅಂಕ ಪಡೆದ ಪ್ರತಿಭಾವಂತ ಮಕ್ಕಳು ಅರ್ಜಿ ಸಲ್ಲಿಸಬಹುದು. 2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದ ಪ್ರಥಮ ಮತ್ತು ದ್ವಿತೀಯ ವರ್ಷದ ಪಿ.ಯು.ಸಿ., ವ್ಯಾಸಂಗ ಮಾಡುತ್ತಿರುವ ವಿದಾರ್ಥಿ-ವಿದ್ಯಾರ್ಥಿನಿಯರು ಅಂಕಪಟ್ಟಿ ಜೆರಾಕ್ಸ್‌ನೊಂದಿಗೆ ಕಾಲೇಜಿನ ಪ್ರವೇಶಕ್ಕೆ ಕಟ್ಟಿದ ಶುಲ್ಕದ ರಶೀದಿಯ ಜೆರಾಕ್ಸ್‌ನೊಂದಿಗೆ ಕೊಡುವುದು.

ವಿವರಕ್ಕೆ ಸಿ.ಆರ್. ವಿರೂಪಾಕ್ಷಪ್ಪ ಅಧ್ಯಕ್ಷರು, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್, ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ-577001 ಇಲ್ಲಿಗೆ ಜುಲೈ 1 ರಿಂದ 10 ರೊಳಗೆ ಸಂಪರ್ಕಿಸಬಹುದು ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಭರತ್ ಚನ್ನಗಿರಿ ತಿಳಿಸಿದ್ದಾರೆ. ವಿದ್ಯಾರ್ಥಿ ವೇತನ ಕೂಪನ್ ಕಛೇರಿಗೆ ತಲುಪಿಸುವ ಕೊನೆಯ ದಿನಾಂಕ 31-07-2023.

## ಎಸ್.ಬಿ.ಸಿ. ಕಾಲೇಜಿನಲ್ಲಿಂದು ಕಾರ್ಯಾಗಾರ

ಎಸ್.ಬಿ.ಸಿ. ಪ್ರಥಮ ದರ್ಜೆ ಕಾಲೇಜು, ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ ಇವುಗಳ ಸಂಯುಕ್ತಾಶ್ರಯದಲ್ಲಿ 'ಕಮ್ಯೂನಿಟಿ ಇಂಪ್ಯಾಕ್ಟ್ ಇನಿಶಿಯೇಟಿವ್ ಅಂಡ್ ಪ್ರಾಜೆಕ್ಟ್ ವರ್ಕ್ : ಟ್ರೈನ್ ದಿ ಟ್ರೈನರ್ಸ್ ಅಂಡ್ ದಿ ತಾಟ್' ವಿಷಯ ಕುರಿತು ತರಬೇತಿಯನ್ನು ಬೆಳಿಗ್ಗೆ 10.30 ರಿಂದ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಅಥಣಿ ವೀರಣ್ಣ ವಹಿಸುವರು. ಪ್ರೊ. ಬಿ.ಡಿ. ಕುಂಬಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಪ್ರೊ. ಸತ್ಯನಾರಾಯಣ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ಪ್ರೊ. ಲಕ್ಷ್ಮಣ್ ಪಿ., ಪ್ರೊ. ಅನಿತಾ ಹೆಚ್.ಎಸ್., ಪ್ರೊ. ಶ್ರೀನಿವಾಸ್ ಕೆ.ಟಿ. ಆಗಮಿಸುವರು. ಎಸ್.ಬಿ.ಸಿ. ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ ಉಪಸ್ಥಿತರಿರುವರು.

## ಶ್ರೀ ಗಾಯತ್ರಿ ಹೋಮಕ್ಕೆ ಭಕ್ತರಿಗೆ ಆಹ್ವಾನ

ದಾವಣಗೆರೆ, ಜೂ.26- ನಗರದ ಶ್ರೀ ಗಾಯತ್ರಿ ಪರಿವಾರದಿಂದ ಸಾರ್ವಜನಿಕವಾಗಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಶ್ರೀ ಗಾಯತ್ರಿ ಹೋಮ ಹಮ್ಮಿಕೊಳ್ಳಲಾಗಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ. ಸುಶೀಲಮ್ಮ ತಿಳಿಸಿದ್ದಾರೆ. ಯಾವುದೇ ಜಾತಿ, ಮತ, ಲಿಂಗ ಭೇದವಿಲ್ಲದೇ ಈ ಅಧ್ಯಾತ್ಮ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಬಹುದು.

ಬರುವ ಜುಲೈ 23 ರ ಭಾನುವಾರ ನಗರದ ಎಂ.ಸಿ.ಸಿ 'ಬಿ' ಬ್ಲಾಕ್‌ನ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ದಾವಣಗೆರೆ ಗೌಡ ಸಾರಸ್ವತ ಸಮಾಜದ ಸಹಯೋಗದಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ 9535737979, 9342441194, 9535854421, 9845277088, 9448979957 ಸಂಪರ್ಕಿಸಿ.

## ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ ಮತ್ತು ಮಾರಾಟಕ್ಕೆ ನಿಷೇಧ

ದಾವಣಗೆರೆ, ಜೂ.26- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಅಂಗಡಿ/ಮಳಿಗೆಗಳ ಮಾಲೀಕರು ಅಥವಾ ಮಾರಾಟಗಾರರು ಯಾವುದೇ ರೀತಿಯ ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ಸಾಗಾಣಿಕೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

ಮಹಾನಗರ ಪಾಲಿಕೆ ವ್ಯಾಪ್ತಿಯ ಯಾವುದೇ ವ್ಯಕ್ತಿ, ಅಂಗಡಿ ಮಾಲೀಕ, ಮಾರಾಟಗಾರ, ಸಗಟು ಮಾರಾಟಗಾರ, ವ್ಯಾಪಾರಿ ಅಥವಾ ಚಿಲ್ಲರೆ ವ್ಯಾಪಾರಿಗಳು, ಪ್ಲಾಸ್ಟಿಕ್‌ನಿಂದ ತಯಾರಿಸಿದ ಯಾವುದೇ ರೀತಿಯ ಕ್ಯಾರಿಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಲೋಟ ಹಾಗೂ ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಮತ್ತು ಕ್ಲಿಂಗ್ ಫಿಲ್ಮ್ಸ್, ಥರ್ಮೋಕೋಲ್ ಹಾಗೂ ಪ್ಲಾಸ್ಟಿಕ್ ಬೀಡ್ಸ್‌ನಿಂದ ತಯಾರಿಸಿದಂತಹ ವಸ್ತುಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ ಮಾರಾಟ ಮತ್ತು ವಿತರಣೆ ಮಾಡುವುದನ್ನು ನಿಷೇಧಿಸಿದೆ ಹಾಗೂ ಸರ್ಕಾರದ ನಿರ್ದೇಶನದಂತೆ ವಿನಾಯಿತಿ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಇಂದು ಸಂಸದ ಸಿದ್ದೇಶ್ವರರ ಪ್ರವಾಸ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 1130 ಕ್ಕೆ ದಾವಣಗೆರೆಯ ರೈಲ್ವೆ ನಿಲ್ದಾಣದಲ್ಲಿ ಧಾರವಾಡ-ಬೆಂಗಳೂರು 'ವಂದೇ ಭಾರತ್' ರೈಲಿನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳಲಿದ್ದಾರೆ.

ಮಧ್ಯಾಹ್ನ 2.30ಕ್ಕೆ ಹೊನ್ನಾಳಿ ಪಟ್ಟಣದ ಗುರುಭವನದಲ್ಲಿ ತೋಟಗಾರಿಕೆ ಇಲಾಖೆಯ ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಸಭೆಯಲ್ಲಿ ಸಂಸದರು ಪಾಲ್ಗೊಳ್ಳಲಿದ್ದಾರೆ.

## ಇಂದು ಸಿಪಿಐ ಜಿಲ್ಲಾ ಮಂಡಳಿಯಿಂದ ಸರ್ಕಾರದ ವಿರುದ್ಧ ಚಳುವಳಿ

ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ರೈತ ಮತ್ತು ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸರ್ಕಾರದ ವಿರುದ್ಧ ಇಂದು ಚಳುವಳಿ ನಡೆಸಲಾಗುವುದು ಎಂದು ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಕಾಂ.ಆವರಗೆರೆ ಚಂದ್ರು ತಿಳಿಸಿದ್ದಾರೆ. ಬೆಳಿಗ್ಗೆ 11:30ಕ್ಕೆ ಜಯದೇವ ಸರ್ಕಲ್ ಬಳಿ ಕಾರ್ಯಕರ್ತರು ಸೇರಿ ಎಸಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು. ಪಕ್ಷದ ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಖಜಾಂಚಿ ಆನಂದರಾಜ್, ಮುಖಂಡ ಟಿ.ಹೆಚ್. ನಾಗರಾಜ್ ಮತ್ತಿತರರು ನೇತೃತ್ವ ವಹಿಸುವರು.

# 98ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ ಚನ್ನಗಿರಿ ಆರ್.ವಿರೂಪಾಕ್ಷಪ್ಪ



ದಾವಣಗೆರೆ, ಜೂ. 26 - ನಗರದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಆಜೀವ ಗೌರವಾಧ್ಯಕ್ಷರೂ, ಶ್ರೀ ಕನ್ನಿಕಾಪರಮೇಶ್ವರಿ ಡೈಮಂಡ್ ಜ್ಯುಬಿಲಿ ವಿದ್ಯಾಪೀಠದ ಗೌರವಾಧ್ಯಕ್ಷರೂ, ಎಸ್‌ಕೆಪಿ ಬ್ಯಾಂಕ್‌ನ ಮಾಜಿ ಅಧ್ಯಕ್ಷರೂ, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ ಅಧ್ಯಕ್ಷರೂ ಆದ ಚನ್ನಗಿರಿ ಆರ್. ವಿರೂಪಾಕ್ಷಪ್ಪ ಅವರ 98ನೇ ಜನ್ಮದಿನದ ಪ್ರಯುಕ್ತ ಎಸ್‌ಕೆಪಿ ರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯಾಧ್ಯಕ್ಷ ಕಾಸಲ್ ಸತೀಶ್, ಕಾರ್ಯದರ್ಶಿ ರವೀಂದ್ರಗುಪ್ತ, ಸಹ ಕಾರ್ಯದರ್ಶಿ ಸತ್ಯನಾರಾಯಣ ಸ್ವಾಮಿ ಎ.ಎಸ್., ಖಜಾಂಚಿ ಎಂ.ಕೆ. ನಾಗೇಂದ್ರ ಕುಮಾರ್, ಶ್ರೀ ಕನ್ನಿಕಾಪರಮೇಶ್ವರಿ ಕೋ ಆಪರೇಟಿವ್ ಬ್ಯಾಂಕಿನ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ಬ್ಯಾಂಕಿನ ಸಿಇಓ ಪ್ರಶಾಂತ್ ಪಡಗಲ್, ಶ್ರೀ ಕನ್ನಿಕಾಪರಮೇಶ್ವರಿ ಡೈಮಂಡ್ ಜ್ಯುಬಿಲಿ ವಿದ್ಯಾಪೀಠದ ಅಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ, ಕಾರ್ಯದರ್ಶಿ ಅನಂತರಾಮ ಶೆಟ್ಟಿ, ಕಾಸಲ್ ವಿ. ನಾಗರಾಜ್, ಶ್ರೀ ವಾಸವಿ ಯುವಜನ ಸಂಘದ ಅಧ್ಯಕ್ಷ ಸುನೀಲ್, ಕಾರ್ಯದರ್ಶಿ ಅಜಿತ್ ಮತ್ತು ಇತರರು ಶುಭಾಶಯ ಸಲ್ಲಿಸಿದರು.

**ತಕ್ಷಣ ಬೇಕಾಗಿದ್ದಾರೆ**

ಕಾಮರ್ಸ್ ಮಾಸ್ಟರ್ ಡಿಗ್ರಿ/ ಡಿಗ್ರಿ ಪಡೆದಿರುವ ಯುವಕರು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :

**08192 295566**

**ಹೊಲ ಮತ್ತು ನಿವೇಶನ ಮಾರಾಟಕ್ಕೆ ಇದೆ**

ಹರಿಹರ ತಾಲ್ಲೂಕು ಅಮರಾವತಿ ಗ್ರಾಮದಲ್ಲಿ ರಸ್ತೆ ಬದಿಯಲ್ಲಿರುವ 3 ಎಕರೆ ಜಮೀನು ಮತ್ತು ಹರಿಹರ ಪೇಟೆ ಬೀದಿಯಲ್ಲಿ ಇರುವ 30x50 ಅಳತೆಯ ನಿವೇಶನ ಮಾರಾಟಕ್ಕೆ ಇದೆ.

ಸೈಟು ಖರೀದಿದಾರರು ಮತ್ತು ಕೆಲವು ಷರತ್ತುಗಳೊಂದಿಗೆ ಮಧ್ಯವರ್ತಿಗಳು ಸಂಪರ್ಕಿಸಬಹುದು.

**ಮೊ : 70228 43852**

YOGI RAM
SHASHI EDUCAIONAL TRUST (R)

LALITHA IIT and NEET ACADEMY
(LALITHA PRE UNIVERSITY COLLEGE)
#67/1, LOKIKERE MAIN ROAD, DAVANGERE. KARNATAKA
FOR REGISTRATION CONTACT
7022004042 / 7022004109 / 9980629965

CREATING THE FUTURE DOCTORS ++++. 2024
ONE YEAR
LONG TERM NEET
COACHING PROGRAMME
ಡಾಕ್ಟರ್ ಆಗುವ ನಿಮ್ಮ ಕನಸಿಗೆ ಸಮರ್ಥ ಆಯ್ಕೆ
ADMISSIONS OPEN
NEET LONG TERM BATCH
AND
NEET REPEATERS
Separate Hostel Facility for Boys & Girls
CLASSES COMMENCE FROM JULY- 3RD 2023




# ಮುಂಗಾರು ಹಂಗಾಮಿಗೆ ವಿಮಾ ಯೋಜನೆ ಅನುಷ್ಠಾನ

## ಬೆಳೆ ಸಾಲ ಮಂಜೂರಾತಿಗೆ ಬೆಳೆ ವಿಮೆ ಕಡ್ಡಾಯ

ದಾವಣಗೆರೆ, ಜೂ.26- ಜಿಲ್ಲೆಯಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯನ್ನು ಜಾರಿಗೊಳಿಸಿದ್ದು, ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಬೆಳೆ ಸಾಲ ಪಡೆದ ಅಥವಾ ಪಡೆಯದ ರೈತರು ನೋಂದಾಯಿಸಿಕೊಳ್ಳಬಹುದು.

ಬೆಳೆ ಸಾಲ ಪಡೆದ ರೈತರನ್ನು ಬೆಳೆ ಸಾಲ ಮಂಜೂರು ಮಾಡುವಾಗ, ಕಡ್ಡಾಯವಾಗಿ ಬೆಳೆ ವಿಮೆಗೆ ಒಳಪಡಿಸಲಾಗುವುದು. ಬೆಳೆ ಸಾಲ ಪಡೆಯದ, ಇಚ್ಛೆಯುಳ್ಳ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ, ಖಾತೆ ಪುಸ್ತಕ, ಪಾಸ್ ಪುಸ್ತಕ, ಕಂದಾಯ ರಶೀದಿ ಹಾಗೂ ಆಧಾರ ಸಂಖ್ಯೆಯನ್ನು ನೀಡಿ ಹತ್ತಿರದ ಬ್ಯಾಂಕ್, ಆರ್ಥಿಕ ಸಂಸ್ಥೆಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ವಿಮಾ ಕಂತನ್ನು ಪಾವತಿಸಿ ನೋಂದಾಯಿಸಲು ವಿನಂತಿಸಿದೆ.

ಯೋಜನೆಯಡಿ ದಾವಣಗೆರೆ ಜಿಲ್ಲೆಯಲ್ಲಿ ಅಧಿಸೂಚನೆಗೊಂಡ ಬೆಳೆಗಳ ವಿವರ. ಮಳೆ ಆಧಾರಿತ ಬೆಳೆಗಳಾದ ಮುಸುಕಿನ ಜೋಳ, ತೊಗರೆ, ಈರುಳ್ಳಿ, ಎಳ್ಳು, ಜೋಳ, ನೆಲಗಡಲೆ, ರಾಗಿ ಟೊಮ್ಯಾಟೋ, ನವಣೆ, ಹುರುಳಿ ಹತ್ತಿ ಇತ್ಯಾದಿ ಮತ್ತು ನೀರಾವರಿ ಬೆಳೆಗಳಾದ ಭತ್ತ, ಮುಸುಕಿನ ಜೋಳ ಸೂರ್ಯಕಾಂತಿ ಇತ್ಯಾದಿ. ಚನ್ನಗಿರಿ, ಜಗಳೂರು, ದಾವಣಗೆರೆ, ನ್ಯಾಮತಿ, ಹರಿಹರ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿನ ರೈತರು ಬೆಳೆ ವಿಮೆಗೆ ನೋಂದಣಿ ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತೋಟಗಾರಿಕೆ ಇಲಾಖೆ, ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರಗಳನ್ನು ಸಂಪರ್ಕಿಸುವಂತೆ ಕೃಷಿ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ರಾತ್ರಿ 11 ಗಂಟೆವರೆಗೆ ತ್ವರಿತ, ನೋಂದಾಯಿತ ಅಂಚೆ ಸೇವೆ

ದಾವಣಗೆರೆ, ಜೂ.26- ಭಾರತೀಯ ಅಂಚೆ ಇಲಾಖೆಯ ಆರ್.ಎಂ.ಎಸ್ 'ಕ್ಯೂ' ವಿಭಾಗದ ಅಧೀನದಲ್ಲಿ ನಗರದ ರೈಲ್ವೆ ನಿಲ್ದಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರ್.ಎಂ.ಎಸ್ ಕಚೇರಿ ಕೌಂಟರ್‌ನಲ್ಲಿ ಸಂಜೆ 6 ರಿಂದ ರಾತ್ರಿ 11 ಗಂಟೆಯವರೆಗೆ ತ್ವರಿತ ಅಂಚೆ ಸೇವೆಯ ಜೊತೆಗೆ ನೋಂದಾಯಿತ ಅಂಚೆ ಸೇವೆಯನ್ನು ಒದಗಿಸಲಾಗುತ್ತಿದೆ.

ಕಚೇರಿಯಲ್ಲಿ ಅಂಚೆ ಚೀಟಿಗಳು ಕೂಡಾ ಲಭ್ಯವಿದ್ದು, ಎಲ್ಲಾ ಸೇವೆಗಳ ಶುಲ್ಕವನ್ನು ಗ್ರಾಹಕರು ಡಿಜಿಟಲ್ ಪಾವತಿ ಅಥವಾ ಕ್ಯೂ.ಆರ್ ಕೋಡ್ ಮೂಲಕ ಪಾವತಿಸಬಹುದು ಎಂದು ಮಂಗಳೂರು ಆರ್.ಎಂ.ಎಸ್. ಕ್ಯೂ ವಿಭಾಗ ಅಧೀಕ್ಷಕ ರವೀಂದ್ರ ನಾಯ್ಕ್ ಎಂ. ತಿಳಿಸಿದ್ದಾರೆ.

# ದೇಶೀಯ ತಳಿಗಳಿಗೆ ಒತ್ತು ನೀಡಿ, ಮತ್ತೆ ಬೆಳೆಸೋಣ

## ಮಲೇಬೆನ್ನೂರಿನ ಬೊಗಸೆ ಭತ್ತ ಬೀಜ ಪ್ರದಾನ ಸಮಾರಂಭದಲ್ಲಿ ಶ್ರೀ ಕಾಡಸಿದ್ದೇಶ್ವರ ಸ್ವಾಮೀಜಿ



ಮಲೇಬೆನ್ನೂರು, ಜೂ.26- ಭಾರತದಲ್ಲಿರುವ ವೈವಿಧ್ಯತೆ ಹಾಗೂ ವೈವಿಧ್ಯಮಯ ತಾಣಗಳು ಪ್ರಪಂಚದ ಬೇರೆ ಯಾವ ದೇಶದಲ್ಲೂ ಇಲ್ಲ. ಹಾಗಾಗಿ ಭಾರತ ಪ್ರಪಂಚದ ತವರೂರಾಗಿದೆ ಎಂದು ಕೊಲ್ಲಾಪುರದ ಕನ್ಹೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ತೀರ್ಥಹಳ್ಳಿಯ ಕೃಷಿ ಪ್ರಯೋಗ ಪರಿವಾರ ಮತ್ತು ಶರಣ ಮುದ್ದಣ ಸಾವಯವ ಕೃಷಿ ಪರಿವಾರ ಹಾಗೂ ಶ್ರೀ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇಂದು ಹಮ್ಮಿಕೊಂಡಿದ್ದ 'ಶುದ್ಧ ನೈವೇದ್ಯ ಸಮರ್ಪಣಂ - ಬೊಗಸೆ ಭತ್ತ ಬೀಜ ಪ್ರಧಾನ' ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ವೇದಗಳ ಕಾಲದಿಂದ ಹಿಡಿದು ಇವತ್ತಿನವರೆಗೂ ನಮ್ಮ ವೈವಿಧ್ಯತೆ ಹಾಗೆ ಇದೆ. ಅದನ್ನು ನಾವು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಮಣ್ಣಗಳೂ ಸಹ ವೈವಿಧ್ಯತೆ ಹೊಂದಿದ್ದು, ಒಂದೊಂದು ಭಾಗದಲ್ಲಿ ಒಂದೊಂದು ಬಗೆಯ ಮಣ್ಣು ಇರುತ್ತದೆ. ಆ ಮಣ್ಣಿನ ಗುಣಕ್ಕೆ ತಕ್ಕಂತೆ ನಾವು ಬೆಳೆ ಬೆಳೆಯಬೇಕೆಂದು ಸ್ವಾಮೀಜಿ ರೈತರಿಗೆ ಹೇಳಿದರು.

ಅಷ್ಟೇ ಅಲ್ಲ, ಪರಿಸರ ಕೂಡ ವಿಭಿನ್ನವಾಗಿದೆ. ಕರಾವಳಿ ಭಾಗದಲ್ಲಿ ಒಂದು ವಾತಾವರಣ ಇದ್ದರೆ, ಉತ್ತರ ಕರ್ನಾಟಕದಲ್ಲಿ ಮತ್ತೊಂದು ವಾತಾವರಣ ಇರುತ್ತದೆ. ಅಲ್ಲಿಯ ಜನರೂ ಕೂಡಾ ಅದಕ್ಕೆ ತಕ್ಕಂತೆ ವಾಸಿಸುತ್ತಿದ್ದಾರೆ. ಕೃಷಿ ಕೂಡ ಹಾಗೆ ಇದೆ. ಈ ನಿಟ್ಟಿನಲ್ಲಿ ರೈತರು ದೇಶೀಯ ತಳಿಗಳಿಗೆ ಒತ್ತು ನೀಡಬೇಕು. ವೈವಿಧ್ಯಮಯ ಬೆಳೆಗಳನ್ನು ಬೆಳೆಯುವುದರ ಜೊತೆಗೆ ವೈವಿಧ್ಯಮಯ ಆಹಾರ ಬಳಕೆ ಮಾಡಬೇಕು. ಕೃಷಿ ಸಂಸ್ಕೃತಿ, ನೈವೇದ್ಯ ಒಂದಕ್ಕೊಂದು ಸಂಬಂಧ ಹೊಂದಿವೆ ಎಂದು ಸ್ವಾಮೀಜಿ ರೈತರಿಗೆ ಅರ್ಥೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶರಣ ಮುದ್ದಣ ಸಾವಯವ ಕೃಷಿ ಪರಿವಾರದ ಬೀಜ ಸಂರಕ್ಷಕ ಕುಂಬಳೂರಿನ ಎ.ಎನ್. ಆಂಜನೇಯ ಮಾತನಾಡಿ, ಪಾರಂಪರಿಕ ಭತ್ತದ ತಳಿಗಳ ಸಂರಕ್ಷಣಾ ಅಭಿಯಾನ ನಮ್ಮ ದೇಶದಲ್ಲಿ ನಡೆಯುತ್ತಿರುವ ಬಗ್ಗೆ ಹೇಳಿ, ದೇಶೀಯ ಭತ್ತದ ಬೀಜಗಳ ಮಹತ್ವ ತಿಳಿಸಿಕೊಟ್ಟರು.

ದೇವಸ್ಥಾನ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ.ಚಿದಾನಂದಪ್ಪ, ಹರಿಹರ ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಮಾತನಾಡಿ, ರೈತರು ದೇಶೀಯ ಬೀಜಗಳ ಬಳಕೆ ಹಾಗೂ ಸಾವಯವ ಕೃಷಿಗೆ ಒತ್ತು ನೀಡಬೇಕೆಂದರು.

ಗುತ್ತೂರಿನ ಸಿದ್ಧಾರೂಢ ಮಠ ಶ್ರೀ ಪ್ರಭುಲಿಂಗ ಸ್ವಾಮೀಜಿ, ದಾಗಿನಕಟ್ಟೆ ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ 40 ರೈತರಿಗೆ 40 ದೇಶೀಯ ತಳಿ ಭತ್ತದ ಬೀಜಗಳನ್ನು ವಿತರಿಸಲಾಯಿತು.

ರೈತರಾದ ನಿಟ್ಟೂರಿನ ಇ.ಎಂ.ಮರುಳಸಿದ್ದಪ್ಪ, ಬಿ.ಜಿ. ಧನಂಜಯ, ಎಸ್.ಜಿ.ಪ್ರಭುದೇವ್, ಮಲೇಬೆನ್ನೂರಿನ ಕೆ.ಜಿ. ವೀರನಗೌಡ್ರು, ಕೆ.ಜಿ.ರಂಗನಾಥ್, ಹೆಚ್.ಜಿ.ಚಂದ್ರಶೇಖರ್, ಕುಂಬಳೂರಿನ ಎಸ್.ದೇವರಾಜ್, ಟಿ.ಜಗದೀಶ್, ನಾಗೋಳ್ ಚಂದ್ರಶೇಖರ್, ಎನ್.ಲೋಕೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ನಿಟ್ಟೂರಿನ ಇ.ಎಂ.ಸುಜಿತ್ ಸ್ವಾಗತಿಸಿದರು. ಕುಂಬಳೂರಿನ ಎಸ್.ಕೆ.ಹನುಮಂತಗೌಡ ವಂದಿಸಿದರು.

# ಮಾದಕ ವಸ್ತು ಸೇವನೆಯಿಂದ ವ್ಯತಿರಿಕ್ತ ಪರಿಣಾಮ : ನ್ಯಾ. ಮಹಾವೀರ



ದಾವಣಗೆರೆ, ಜೂ. 26- ಹದಿಹರೆಯದಲ್ಲಿ ಶೋಕಿ, ಮೋಜು-ಮಸ್ತಿಗಾಗಿ, ಆನಂದ ಪಡೆಯಲೆಂದು ಶುರುವಾದ ಮಾದಕ ವಸ್ತುಗಳ ಸೇವನೆ ವ್ಯಸನವಾಗಿ, ಚಟವಾಗಿ ಪರಿವರ್ತನೆಯಾಗಿ, ಇಡೀ ಜೀವನವನ್ನೇ ದುರಂತಮಯವಾಗಿಸುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಮಹಾವೀರ ಮ. ಕರಣ್ಣವರ ಎಚ್ಚರಿಸಿದರು.

ನಗರದ ಎಆರ್‌ಎಂ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಎಆರ್‌ಎಂ ಕಾಲೇಜು ಹಾಗೂ ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ 'ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕ ವ್ಯವಸ್ಥೆ, ಮನುಷ್ಯನ ಮಾನಸಿಕ, ದೈಹಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಮಾದಕ ವ್ಯಸನ, ಕಳ್ಳ ಸಾಗಾಣಿಕೆ ತಡೆಗಟ್ಟಲು ವಿದ್ಯಾರ್ಥಿ ಯುವಜನರು ಸರ್ಕಾರಿ ಇಲಾಖೆ ಜೊತೆ ಕೈಜೋಡಿಸಲು ಮುಂದಾಗಬೇಕು ಎಂದು ಕರೆ ನೀಡಿದರು.

ದೇಶ ಮತ್ತು ಸಮಾಜದ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ಚಿಂತನೆ ಮಾಡಬೇಕಾದ ಅಗತ್ಯವಿದೆ. ಮಾದಕ ವ್ಯಸನ ತಡೆಯಲು ಕಠಿಣ ಕಾನೂನುಗಳಿದ್ದರೂ, ಜನರಲ್ಲಿ ಇನ್ನೂ ಅರಿವು, ಜಾಗೃತಿ ಮೂಡದಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಮಾದಕ ದ್ರವ್ಯ ಚಟಕ್ಕೆ ಬಲಿಯಾಗುವುದನ್ನು ಹೆಚ್ಚಾಗುವುದನ್ನು ಕಾಣುತ್ತೇವೆ. ಸ್ನೇಹಿತರ ಒತ್ತಾಯ, ದೈಹಿಕ, ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳಲು ಜನರು ಮಾದಕ ವ್ಯಸನಕ್ಕೆ ಒಳಗಾಗುತ್ತಾರೆ. ಬಹಳಷ್ಟು ಜನರಿಗೆ ಮಾದಕ ವಸ್ತುಗಳ ಬಗ್ಗೆ ಅರಿವಿರುವುದಿಲ್ಲ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಜೀವನ, ವ್ಯಕ್ತಿತ್ವ ಹಾಳು ಮಾಡುವ ಮಾದಕ ವಸ್ತುಗಳ ಮಾರಾಟ, ಸೇವನೆ ನಿಯಂತ್ರಣ ಮಾಡುವಲ್ಲಿ ವ್ಯವಸ್ಥೆ ವಿಫಲವಾಗಿದೆ. ಮಾದಕ ವಸ್ತುಗಳ ಚಟಕ್ಕೆ ಬಲಿಯಾಗಿರುವವರಲ್ಲಿ ವಿದ್ಯಾರ್ಥಿಗಳೇ ಹೆಚ್ಚಾಗಿರುವುದು ದುರಂತದ ಸಂಗತಿ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಭಾರತದ 142 ಕೋಟಿ ಜನಸಂಖ್ಯೆಯಲ್ಲಿ 2.90 ಕೋಟಿ ಜನ ಮಾದಕ ವ್ಯಸನಿಗಳಿದ್ದಾರೆ. 25 ಲಕ್ಷ ಗಾಂಜಾ ಸೇವನೆ, 28 ಲಕ್ಷ ಅಫೀಮು ಸೇವನೆಗೆ ದಾಸರಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಶೇ. 13 ರಷ್ಟು ಪುರುಷರು, ಶೇ. 6 ರಷ್ಟು ಮಹಿಳೆಯರು ಮಾದಕ ವಸ್ತುಗಳ ವ್ಯಸನಿಗಳಿದ್ದಾರೆ. ಬಹಳಷ್ಟು ಖುಷಿಗಾಗಿ ಮಾದಕ ದ್ರವ್ಯ, ಮಾದಕ ವಸ್ತುಗಳ ಸೇವನೆಯಿಂದ ಖಿನ್ನತೆಗೆ ಒಳಗಾಗುತ್ತಾರೆ. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ರಕ್ತದೊತ್ತಡ, ಮಧುಮೇಹ, ಅನ್ನನಾಳ ಕ್ಯಾನ್ಸರ್, ಲಿವರ್ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು.

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಮನೋವೈದ್ಯ ಡಾ. ಮೃತ್ಯುಂಜಯ, ಮಾನಸ ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಬಿ.ಎಸ್. ಲಕ್ಷ್ಮಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.

ಪ್ರಾಚಾರ್ಯ ಎಂ.ಡಿ. ಅಣ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ. ಪಿ.ಡಿ. ಮುರುಳೀಧರ, ಆರೋಗ್ಯಾಧಿಕಾರಿಗಳಾದ ಡಾ. ಸುರೇಶ್ ಕುರ್ಕಿ, ಡಾ. ದೇವರಾಜ್, ಸಂತೋಷ್ ಕುಮಾರ್, ಅಬಕಾರಿ ಅಧೀಕ್ಷಕರಾದ ಹೆಚ್. ಸವಿತ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಜಯಶೀಲ ಪ್ರಾರ್ಥಿಸಿದರು. ಉಪನ್ಯಾಸಕ ಹೆಚ್. ಶಾಂತನಾಯ್ಕ ನಿರೂಪಿಸಿದರು. ಡಿ. ಅಂಜಿನಪ್ಪ ಸ್ವಾಗತಿಸಿದರು.

ತಾತ್ಕಾಲಿಕವಾಗಿ ಆನಂದ ನೀಡುವ ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯನ ಮನಸ್ಸು ವಿಕೃತಿಯಾಗುವ ಜೊತೆಗೆ ಸಮಾಜದಲ್ಲಿ ಅಪರಾಧಗಳು ಹೆಚ್ಚಾಗುತ್ತವೆ. ಮಾನಸಿಕ ಒತ್ತಡ, ಸಾಂಸಾರಿಕ ಸಮಸ್ಯೆಗಳ ಉಲ್ಬಣದಿಂದಾಗಿ ಮಾದಕ ವಸ್ತುಗಳ ಸೇವನೆಗೆ ಮಾರು ಹೋಗುತ್ತಾರೆ. ಆದರೆ ಇದರ ಸೇವನೆಯಿಂದ ಮಾನಸಿಕ ತೊಂದರೆ, ನೆನಪಿನ ಶಕ್ತಿ ಕಡಿಮೆಯಾಗುವುದು, ಮಿದುಳಿನ ಮೇಲೆ ಪರಿಣಾಮ ಬೀರುತ್ತದೆ.

- ಮಹಾವೀರ ಮ. ಕರಣ್ಣವರ,
ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ಆರೋಗ್ಯವಂತ, ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಹೊಣೆಯಾಗಿದೆ. ಯುವಜನರು ದುಶ್ಚಟಗಳಿಗೆ ಬಲಿಯಾಗದೇ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ.

- ಎಲ್.ಹೆಚ್. ಅರುಣ್ ಕುಮಾರ್,
ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ

# ದಿದ್ದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ಜಗಳೂರು, ಜೂ. 26- ಜಗಳೂರು ತಾಲ್ಲೂಕಿನ ದಿದ್ದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ. ಮರುಳಸಿದ್ದಪ್ಪ, ಉಪಾಧ್ಯಕ್ಷರಾಗಿ ಎಂ.ಜಿ. ಚನ್ನಬಸಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹರೀಶ್ ಕುಮಾರ್, ಸಿಇಓ ಡಿ.ಎಂ. ಮರುಳಸಿದ್ದಯ್ಯ ತಿಳಿಸಿದ್ದಾರೆ.

# ನಕಲಿ ಸಹಿ ಮಾಡಿ ನಿವೇಶನ ವರ್ಗಾವಣೆ

ದಾವಣಗೆರೆ, ಜು. 26- ನಕಲಿ ಸಹಿ ಮಾಡಿ ನಿವೇಶನಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ಹರಿಹರ ಅಮರಾವತಿ ಕಾಲೋನಿಯ ಆಶಾ ಎಂಬುವವರು ದಾವ ಣಗೆರೆ ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ.

ವಿನಾಯಕ ನಗರದಲ್ಲಿ 2008ರಂದು ಎರಡು ನಿವೇಶನಗಳನ್ನು ಖರೀಸಿದ್ದು, ಕಂದಾಯ ಪಾವತಿ ಮಾಡುತ್ತಿದ್ದೆ. ಇತ್ತೀಚೆಗೆ 2015ರಲ್ಲಿ ಮೂಲ ದಾಖಲಾತಿಗಳು ಕಳೆದು ಹೋಗಿದ್ದು, ಉಪ ನೋಂದಣಾಧಿಕಾರಿಗಳಿಂದ ದೃಢೀಕೃತ ನಕಲನ್ನೂ ಪಡೆದಿರುತ್ತೇನೆ. ಆದರೆ ಇತ್ತೀಚೆಗೆ ನಿವೇಶನಗಳ ಇಸಿ ತೆಗೆಸಿ ನೋಡಿದಾಗ ಶಿವಾನಂದ ಬಿ.ರಾಯ್ಕರ್ ಅವರು ನನ್ನ ಸಹಿ ನಕಲು ಮಾಡಿ, ತಮ್ಮ ಸಹೋದರರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

# ಕ್ರಿಕೆಟಿಗ ಪೃಥ್ವಿ ಷಾ ವಿರುದ್ಧದ ಲೈಂಗಿಕ ಪೀಡನೆ ಆರೋಪ ಸುಳ್ಳು

ಮುಂಬೈ, ಜೂ. 26 – ಕ್ರಿಕೆಟಿಗ ಪೃಥ್ವಿ ಷಾ ತಮ್ಮನ್ನು ಲೈಂಗಿಕವಾಗಿ ಪೀಡಿಸಿದ್ದಾಗಿ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯವಾಗಿರುವ ಸಪ್ನಾ ಗಿಲ್ ಮಾಡಿರುವ ಆರೋಪ ಸುಳ್ಳು ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಸೋಮವಾರದಂದು ಮ್ಯಾಜಿಸ್ಟ್ರೇಟರ ಎದುರು ತನಿಖಾಧಿಕಾರಿ ಈ ವರದಿ ಸಲ್ಲಿಸಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ಪಬ್ ಒಂದರ ಹೊರಗೆ ತನ್ನ ಮೇಲೆ ಲೈಂಗಿಕ ಹಲ್ಲೆ ನಡೆದಿತ್ತು ಎಂದು ಗಿಲ್ ಆರೋಪಿಸಿದ್ದರು. ಈ ಬಗ್ಗೆ ಅವರು ಷಾ ಹಾಗೂ ಅವರ ಸ್ನೇಹಿತ ಆಶಿಷ್ ಯಾದವ್ ವಿರುದ್ಧ ದೂರು ದಾಖಲಿಸಿದ್ದರು.

ಈ ಬಗ್ಗೆ ತನಿಖೆ ನಡೆಸಿದ ಪೊಲೀಸರು, ಪಬ್‌ನಲ್ಲಿದ್ದ ಸಿ.ಸಿ.ಟಿ.ವಿ. ದೃಶ್ಯಗಳನ್ನು ಪರಿಶೀಲಿಸಿದ್ದರು. ಸಿ.ಸಿ.ಟಿ.ವಿ.ಯಲ್ಲಿರುವ ವಿವರಗಳ ಪ್ರಕಾರ, ಗಿಲ್ ಹಾಗೂ ಸ್ನೇಹಿತ ಶೋಬಿತ್ ಠಾಕೂರ್ ಪಾನಮತ್ತರಾಗಿದ್ದರು ಹಾಗೂ ಕುಣಿಯುತ್ತಿದ್ದರು. ಮೊಬೈಲ್‌ನಲ್ಲಿ ಷಾ ವಿಡಿಯೋ ತೆಗೆಯಲು ಠಾಕೂರ್ ಮುಂದಾಗಿದ್ದರು. ಆದರೆ, ಕ್ರಿಕೆಟಿಗ ಅದನ್ನು ತಡೆದಿದ್ದರು. ಈ ವಿವರಗಳನ್ನು ಪರಿಶೀಲಿಸಿದಾಗ, ಪೃಥ್ವಿ ಷಾ ಹಾಗೂ ಇತರರು ಯಾವುದೇ ಲೈಂಗಿಕ ಪೀಡನೆ ನಡೆಸಿಲ್ಲ ಎಂಬುದು ಕಂಡು ಬಂದಿರುವುದಾಗಿ ಪೊಲೀಸರು ಹೇಳಿದ್ದಾರೆ.

ಪೊಲೀಸರು ಸ್ಥಳದಲ್ಲಿದ್ದವರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ. ಘಟನೆಯ ನಂತರ ಗಿಲ್ ಮತ್ತಿತರರು ಬೇಸ್‌ಬಾಲ್ ಬ್ಯಾಟ್ ಹಿಡಿದು ಕ್ರಿಕೆಟಿಗನ ಕಾರು ಬೆನ್ನತ್ತಿದ ಹಾಗೂ ಕಿಟಕಿಯ ಗಾಜುಗಳನ್ನು ಒಡೆದ ವಿಡಿಯೋ ಅನ್ನೂ ಪೊಲೀಸರು ಪರಿಶೀಲಿಸಿದ್ದಾರೆ.

# ಕೆಲಸ ಕೊಡಿಸುವುದಾಗಿ ಹೇಳಿ ವಂಚನೆ

ದಾವಣಗೆರೆ, ಜು. 26- ಎನ್.ಜಿ.ಓ. ಮಾಡಿಕೊಂಡಿರುವುದಾಗಿ ಪರಿಚಯ ಮಾಡಿಕೊಂಡು, ನ್ಯಾಷನಲ್ ಇನ್‌ಫಾರ್ಮೆಟಿಕ್ ಸೆಂಟರ್‌ನಲ್ಲಿ ಗ್ರೇಡ್ ಆಫೀಸರ್ ಮೊದಲಾದ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಕೊಡಿಸುವುದಾಗಿ ಹೇಳಿ ತನ್ನನ್ನೂ ಸೇರಿದಂತೆ ಆರು ಜನರಿಗೆ ನಂಬಿಸಿ ಅವರಿಂದ 13, 76, 000 ರೂ.ಗಳನ್ನು ಪಡೆದಿದ್ದಾರೆ.

ಎನ್.ಐ.ಸಿ. ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಕೊಟ್ಟ ಹಾಗೆ ಲೆಟರ್‌ಗಳನ್ನು ಟೈಪು ಮಾಡಿಸಿ, ಸೀಲು ಹಾಗೂ ಅಧಿಕಾರಿಗಳ ಸಹಿ ಇರುವ ಲೆಟರ್‌ಗಳನ್ನು ಕೊಟ್ಟು, ದಾವಣಗೆರೆ ಜಿಲ್ಲಾಧಿಕಾರಿಗಳ ಸಹಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯ ಆದೇಶದ ಪ್ರತಿಗಳನ್ನು ಕೊಟ್ಟು ಇಲ್ಲಿಯವರೆಗೆ ಕೆಲಸವೂ ಇಲ್ಲದೆ ಹಣವನ್ನೂ ವಾಪಾಸ್ ಕೊಡದೆ ವಂಚಿಸಿದ್ದಾರೆ ಎಂದು ಎಂ.ಸಿ.ಸಿ. ಬಿ ಬ್ಲಾಕ್‌ನ ಖಾಸಗಿ ಶಾಲಾ ಶಿಕ್ಷಕ ಮಧುಸೂದನ್ ಅವರು, ವೀರಭದ್ರಪ್ಪ ಮತ್ತು ನಂದಿನಿ ಅವರುಗಳ ಮೇಲೆ ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಕೆ ಇ.ಪಿ.ಎಫ್.ಓ. ಗಡುವು ವಿಸ್ತರಣೆ

ನವದೆಹಲಿ, ಜೂ. 26 – ಹೆಚ್ಚಿನ ಪಿಂಚಣಿಗಾಗಿ ಅರ್ಜಿ ಸಲ್ಲಿಸುವ ಗಡುವನ್ನು ಇ.ಪಿ.ಎಫ್.ಓ. ಜುಲೈ 11ರವರೆಗೆ ವಿಸ್ತರಿಸಿದೆ.

ಇ.ಪಿ.ಎಫ್.ಓ. ಗಡುವು ವಿಸ್ತರಿಸುತ್ತಿರುವುದು ಎರಡನೇ ಬಾರಿ. ಈ ಹಿಂದೆ ಗಡುವನ್ನು ಮೇ 3, 2023ರಿಂದ ಜೂನ್ 26, 2023ರವರೆಗೆ ವಿಸ್ತರಿಸಲಾಗಿತ್ತು. ಅರ್ಹ ಪಿಂಚಣಿದಾರರು ಸಮಸ್ಯೆ ಎದುರಿಸುತ್ತಿದ್ದರೆ, ಅದನ್ನು ಬಗೆಹರಿಸಿಕೊಳ್ಳಲು ಕೊನೆಯದಾಗಿ 15 ದಿನಗಳ ಕಾಲಾವಕಾಶ ನೀಡಲಾಗಿದೆ ಎಂದು ಇ.ಪಿ.ಎಫ್.ಓ. ಹೇಳಿದೆ.


ಎಂಟನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಕೊಡಗನೂರು ಸಿ.ವಿ. ರುದ್ರಪ್ಪನವರು
ಇಂದಿಗೆ ನೀವು ನಮ್ಮನ್ನು ಅಗಲಿ ಎಂಟು ವರ್ಷಗಳಾದವು.
ಸದಾ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆಯುತ್ತಿರುವ
ಪತ್ನಿ ಗಿರಿಜಮ್ಮ, ಮಕ್ಕಳು, ಸೊಸೆಯಂದಿರು,
ಅಳಿಯ ಮತ್ತು ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು
'ಶ್ರೀ ಸಾಯಿ ನಿಲಯ', 7ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ಶ್ರೀ ಗುರುಕೃಪಾ ಮೆಡಿಕಲ್ಸ್
ಮಹಾರಾಜಪೇಟೆ, ದಾವಣಗೆರೆ. ಮೊ: 94488 73234



ತೃತೀಯ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ನಲ್ಲೂರು ಪಾಂಡುರಂಗ ಎನ್. ರೇವಣಕರ್
ಮಾಲೀಕರು,
ನಲ್ಲೂರು ವಿಶ್ವಾಸ್ ಜ್ಯೂಯಲರ್ಸ್,
ನಲ್ಲೂರು ಪಾಂಡುರಂಗ ಜ್ಯೂಯಲರ್ಸ್, ದಾವಣಗೆರೆ.
ನಿಧನ : 29.06.2020
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಧರ್ಮಪತ್ನಿ : ಶ್ರೀಮತಿ ಶಕುಂತಲ ಪಾಂಡುರಂಗ ರೇವಣಕರ್
ಮಗ-ಸೊಸೆ : ರಾಜೇಶ್ ಮತ್ತು ಶ್ರೀಮತಿ ವಂದನ
ಮಗಳು-ಅಳಿಯ : ಶ್ರೀಮತಿ ವೀಣಾ ಮತ್ತು ರಘುವೀರ್
ಮಗಳು-ಅಳಿಯ : ಶ್ರೀಮತಿ ನಯನ ಮತ್ತು ಸಂಜಯ್
ಮಗ-ಸೊಸೆ : ಸಂತೋಷ್ ಮತ್ತು ಶ್ರೀಮತಿ ಆಶಾ
ಮತ್ತು ಮೊಮ್ಮಕ್ಕಳು ಹಾಗೂ
ನಲ್ಲೂರು ಕುಟುಂಬ ವರ್ಗದವರು



ಹೃದಯಪೂರ್ವಕ ಅಭಿನಂದನೆಗಳು




ತುಮಕೂರು ಡ್ಯಾನ್ಸ್ ಸ್ಕೂಲ್ ಮತ್ತು ಕೋರಿಯೋಗ್ರಾಫರ್ ಅಸೋಸಿಯೇಷನ್ ವತಿಯಿಂದ ಹಾಗೂ ನಮ್ಮ ಕರ್ನಾಟಕ ವಾಹಿನಿಯ ಸಾರಥ್ಯದಲ್ಲಿ ಆಯೋಜಿಸಿದ್ದ 'ನೃತ್ಯ ವೈಭವ-2'ರ ಆಲ್ ಇಂಡಿಯಾ ಅಂತರ ರಾಜ್ಯ ನೃತ್ಯ ಸ್ಪರ್ಧೆಯಲ್ಲಿ ದಾವಣಗೆರೆಯ ನೃತ್ಯ ಸಂಯೋಜಕರಾದ ದಯಾನಂದ್ ಎಸ್. ಹಾಗೂ ಆನಂದ್ ಎಸ್. ಅವರ ನೇತೃತ್ವದ ಸುಪ್ರಸಿದ್ಧ ನೃತ್ಯ ತಂಡ 'ಡಿ-ವೈರಸ್ ಸ್ಪನ್ನರ್ಸ್' ಸಂಸ್ಥೆಯ ಸೀನಿಯರ್ ಗ್ರೂಪ್ ಕಾಂಪಿಟೇಷನ್‌ನಲ್ಲಿ ಮೊದಲ ರನ್ನರ್ ಅಪ್ ಹಾಗೂ ಸೋಲೋ ಸೀನಿಯರ್ ವಿಭಾಗದಲ್ಲಿ ನೃತ್ಯ ವಿದ್ಯಾರ್ಥಿನಿ ಮತ್ತು ತರಳಬಾಳು ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿನಿ
ಕು|| ಎಮ್.ವಿ. ಗುಣಶ್ರೀ
ಎರಡನೇ ರನ್ನರ್ ಅಪ್ ಆಗಿ ಆಯ್ಕೆಯಾಗಿದ್ದಾರೆ.
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ ಶ್ರೀನಿವಾಸರಾವ್ ಎಂ.ಜಿ.
✦ ಶ್ರೀಮತಿ ನಿರ್ಮಲ ಮತ್ತು ಎಂ.ಎಸ್. ವಿಠ್ಠಲ್, ಮಾಜಿ ಮಹಾಪೌರರು ಮತ್ತು ಅಧ್ಯಕ್ಷರು, ನಾಮದೇವ ಶಿಂಪಿ ಸಮಾಜ, ದಾವಣಗೆರೆ.
✦ ಗಣೇಶ್ ಎಂ.ವಿ.
✦ ಸ್ವಾತಿ ಎಂ.ವಿ. ✦ ಅಮೃತವರ್ಷಿಣಿ ಎಂ.ವಿ.
✦ ಶ್ರೀಮತಿ ತೇಜಸ್ವಿನಿ ಮತ್ತು ಪ್ರತೀಕ್ ರಾಶಿಂಕರ್, ಮೈಸೂರು.
ಹಾಗೂ ಸಿಬ್ಬಂದಿ ವರ್ಗದವರು.
ಮಹೇಂದ್ರಕರ್ ಟೆಕ್ಸ್‌ಟೈಲ್ಸ್
ನರಸರಾಜ ರಸ್ತೆ, ದಾವಣಗೆರೆ.